# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

# ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ತುಮಕೂರು

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್ ಶಿಪ್ ಅಕಾಡೆಮಿ (SLA-SISLEP),ಧಾರವಾಡ**

**( ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್ ಶಿಪ್ (NCSL-NIEPA), ನವ ದೆಹಲಿ ಇವರ ಸಹಯೋಗದಲ್ಲಿ)**

**ತರಬೇತಿ ಸಾಹಿತ್ಯ ಕೈಪಿಡಿ**

# “ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ”

**ಸಹಕಾರ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು**

**2023–24**

# ಸಾಹಿತ್ಯ ರಚನಾ ತಂಡ
## ಪರಿಕಲ್ಪನೆ

**ಡಾ. ಬಿ.ಕೆ.ಎಸ್.ವರ್ಧನ್**
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣ ಸಂಸ್ಥೆ, ಕರ್ನಾಟಕ (ಸಿಸ್ಲೆಪ್)
ರೊದ್ದ ರಸ್ತೆ, ಡಯಟ್ ಆವರಣ, ಧಾರವಾಡ.

## ಮಾರ್ಗದರ್ಶನ

**ಕೆ . ಮಂಜುನಾಥ**

**ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತುಮಕೂರು**

## ಸಾಹಿತ್ಯ ರಚನಾ ತಂಡ

ಶ್ರೀಮತಿ ಮಂಗಳ ಗೌರಮ್ಮ
ಹಿರಿಯ ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ಶೈಲಜಾ ಕುಮಾರಿ ಎಂ.ಜಿ.
ಹಿರಿಯ ಉಪನ್ಯಾಸಕರು
ಡಯಟ್ ತುಮಕೂರು

ಶ್ರೀ ರಾಜು ಜಿ.ಎನ್
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ಭಾರತಿ ಎಂ ಬಿ
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ಸರಸ್ವತಿ ಎನ್ ಎಲ್
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀ ನಾಗರಾಜು ಟಿ ಎನ್
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀ ವೇದಮೂರ್ತಿ
ಹಿರಿಯ ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ಮಮತಾ ಮಣಿ ಎಂ.ಇ.
ಹಿರಿಯ ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ನೇತ್ರಾವತಿ ವೈ.ಎನ್.
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ಶ್ರೀದೇವಿ ಎನ್
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀ ಕೃಷ್ಣಕುಮಾರ
ಉಪನ್ಯಾಸಕರು
ಡಯಟ್ ತುಮಕೂರು

ಶ್ರೀಮತಿ ಜ್ಯೋತಿ ಎಮ್ ಎಸ್
ಉಪನ್ಯಾಸಕರು
ಡಯಟ್ ತುಮಕೂರು

## ಎಸ್.ಎಲ್.ಎ – ಸಿಸ್ಲೆಪ್ ತಂಡ

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವೀರಮ್ಮ ಎಸ್, ಉಪನ್ಯಾಸಕರು

# ನಿರ್ದೇಶಕರ ಆಶಯ ನುಡಿಗಳು



**ಡಾ.ಬಿ.ಕೆ.ಎಸ್.ವರ್ಧನ್**
**ನಿರ್ದೇಶಕರು**
**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು**
**ನಿರ್ವಹಣಾ ಸಂಸ್ಥೆ (ಸಿಸ್ಲೆಪ್),**
**ಕರ್ನಾಟಕ, ಧಾರವಾಡ**

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

2023–24 ನೇ ಸಾಲಿನಲ್ಲಿ ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (ಓಅಖಐ), ದೆಹಲಿ ಇವರು ಮಾಡ್ಯೂಲ್‌ಗಳ ರಚನೆಗಾಗಿರೂ. 65000/– ಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಅಧಿಕಾರಿಗಳಿಗೆ ನಾಯಕತ್ವ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅವಶ್ಯವಿರುವ ಹನ್ನೆರೆಡು ವಿಷಯಗಳ

ಮಾಡ್ಯೂಲ್‌ಗಳನ್ನು ರಚಿಸಲು ನಿರ್ಧರಿಸಲಾಯಿತು. ಈ ಮಾಡ್ಯೂಲ್‌ಗಳ ರಚನೆಗಾಗಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ,ಇಳಕಲ್, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮೀಣ, ಮೈಸೂರು, ಕೋಲಾರ ಡಯೆಟ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಡಯೆಟ್‌ಗೆ ತಲಾ ರೂ.5000/- ಗಳನ್ನು ಬಿಡುಗಡೆ ಮಾಡಿ, ಒಂದೊಂದು ವಿಷಯದ ತರಬೇತಿ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ನೀಡಲಾಯಿತು. ಅವರಿಂದ ಸಿದ್ಧಪಡಿಸಲಾದ ಮಾಡ್ಯೂಲ್‌ಗಳನ್ನು ಸಿಸ್ಲೆಪ್‌ನ ಅಧಿಕಾರಿ ವೃಂದ, ವಿಷಯ ಪರಿಣಿತರು ಹಾಗೂ ಸಂಬಂಧಿಸಿದ ಡಯೆಟ್‌ನ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಪುನರ್ ಪರಿಶೀಲಿಸುವ ಮೂಲಕ ಇನ್ನಷ್ಟು ಉತ್ತಮೀಕರಿಸಿ ಅಂತಿಮಗೊಳಿಸಲಾಯಿತು.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

**ದಿನಾಂಕ: 25, ಮಾರ್ಚ, 2025** **(ಡಾ.ಬಿ.ಕೆ.ಎಸ್.ವರ್ಧನ್)**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ(SISLEP), ಕರ್ನಾಟಕ, ಧಾರವಾಡ**

# State Institute of School Leadership, Educational Planning and Management (SISLEP), Karnataka, Dharwad

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010 ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ' ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



**ಸಂಸ್ಥೆಯ ದೂರದರ್ಶಿತ್ವ:**

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ: 08362441129 ಇ–ಮೇಲ್: sislepdirector.dwd@gmail.com**

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024-25 ನೇ ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು,

ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ. ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management,Administration and Training) ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010-11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:**

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ ಖಐಇಒಂಖ ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000 ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000 ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002 ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010 ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' **(SISLEP)** ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದ ನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (ಖಐಂ) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

### ❖ ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ.ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಬಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA,NCSL,NCERT,DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.

- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

❖ **ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು:**

ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು

ಶಿಫಾರಸ್ಸು ಮಾಡುವುದು.ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.
- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೆಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ),ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲಾ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು

ಕಾಯಿದೆ– 2009 ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರ ಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಠಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನು ಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್‌ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೇತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ.

ಪ್ರಸ್ತುತ  ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ, ಶಾಲಾ ನಿರೂಪಣೆ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ,ಸಂಶೋಧನಾ–ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವಿನ್ಯತಾ ವಿಭಾಗ ಹಾಗೂ ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ.

ಶಾಲೆಗಳ ತರಗತಿ ಕೋಣೆಗಳಲ್ಲಿ  ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**
**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**
**ಮಿಕ್ಕುದೆಲ್ಲಂ ಅವಿದ್ಯೆ"**

**-- ರಾಷ್ಟ್ರಕವಿ ಕುವೆಂಪು**

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಮಾಡ್ಯೂಲ್ ನ ಪರಿಚಯ<br>1.1 ವ್ಯಾಪ್ತಿ<br>1.2 ಉದ್ದೇಶಗಳು | 1-5 |
| 2 | ಶಿಕ್ಷಣ ಮತ್ತು ಸಾಂಸ್ಥಿಕ ಘಟಕವಾಗಿ ಶಾಲೆ<br>2.1 ಸಾಮಾಜಿಕ ಸಂಸ್ಥೆಯಾಗಿ ಶಾಲೆ<br>2.2 ಭಾರತದಲ್ಲಿ ಶಾಲಾ ಶಿಕ್ಷಣದ ಪ್ರಸ್ತುತ ಸ್ಥಿತಿ, ಸವಾಲುಗಳು ಮತ್ತು ಸುಧಾರಿಸಲು ಸಲಹೆಗಳು | 6-11 |
| 3 | ಗುಣಾತ್ಮಕ ಶಿಕ್ಷಣದಲ್ಲಿನ ವಿವಿಧ ಭಾಗೀದಾರರು<br>3.1 ಗುಣಾತ್ಮಕ ಶಿಕ್ಷಣ ಪ್ರಕ್ರಿಯೆಯಲ್ಲಿವಿವಿಧ ಭಾಗೀದಾರರ ಪಾತ್ರ 3.2 ವಿವಿಧ ಭಾಗೀದಾರರನ್ನು ಶಾಲಾ ಪ್ರಕ್ರಿಯೆಗೆ ಹೊಂದಿಸಿಕೊಳ್ಳುವ ಕ್ರಮಗಳು<br>3.3 ವಿವಿಧ ಭಾಗೀದಾರರ ಒಳಗೊಳ್ಳುವಿಕೆಯಿಂದ ಗುಣಾತ್ಮಕ ಶಿಕ್ಷಣ ನೀಡುವಲ್ಲಿನ ಯಶೋಗಾಥೆಗಳು | 12-38 |
| 4 | ನನ್ನ ಸಂಸ್ಥೆ-ನನ್ನ ಯೋಜನೆ- ಇದರಲ್ಲಿ ನಾನು ವಿವಿಧ ಭಾಗೀದಾರರನ್ನು ಹೇಗೆ ಹೊಂದಿಸಿಕೊಳ್ಳುವೆ | 39-43 |
| 5 | ಉಪಸಂಹಾರ | 44-45 |
| 6 | ಆಕರ ಗ್ರಂಥಗಳು | 46 |

## ಮಾಡ್ಯೂಲ್ ಪರಿಚಯ

ಗುಣಾತ್ಮಕ ಶಿಕ್ಷಣದ ಗುರಿ ಸಾಧಿತವಾಗುವುದು ಮತ್ತು ಶಿಕ್ಷಣದ ಗುಣಾತ್ಮಕತೆ ವರ್ಧಿಸುವುದು ಸಾಮೂಹಿಕ ಪ್ರಯತ್ನಗಳಿಂದ ಮಾತ್ರ ಸಾಧ್ಯ. ಶಿಕ್ಷಣ ವ್ಯವಸ್ಥೆಯ ಎಲ್ಲಾ ಭಾಗೀದಾರರ ಬದ್ಧತೆ ಮತ್ತು ನಿರಂತರ ಪ್ರಯತ್ನಗಳಿಂದ ಗುಣಾತ್ಮಕ ಶಿಕ್ಷಣದ ಹಕ್ಕನ್ನು ಪ್ರತಿಯೊಂದು ಮಗುವೂ ಅನುಭವಿಸಲು ಸಾಧ್ಯವಾಗುತ್ತದೆ. ಶಿಕ್ಷಣ ವ್ಯವಸ್ಥೆಯ ಭಾಗೀದಾರರಾದ ಪ್ರತಿಯೊಬ್ಬರು ಮಕ್ಕಳ ಸಮಗ್ರ ಹಾಗೂ ಪರಿಣಾಮಕಾರಿ ಕಲಿಕೆಯನ್ನು ಬೆಂಬಲಿಸಲು ಮತ್ತು ಖಾತ್ರಿಪಡಿಸಿಕೊಳ್ಳುವಲ್ಲಿ ಪ್ರಧಾನ ಪಾತ್ರವಹಿಸುತ್ತಾರೆ. ಈ ಪರಿಕಲ್ಪನೆಯಲ್ಲಿ ಭಾಗೀದಾರರಾದ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ, ಜನಪ್ರತಿನಿಧಿಗಳು, ಸ್ಥಳೀಯ ಸಂಸ್ಥೆಗಳು ಗಣನೀಯವಾಗಿ ತಮ್ಮದೇ ಆದ ಕೊಡುಗೆಗಳನ್ನು ನೀಡುವ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಬೆಂಬಲಿಸುವಂತೆ ಗುಣಾತ್ಮಕತೆಯನ್ನು ವರ್ಧಿಸುವಂತೆ ತೊಡಗಿಸುವುದು ಹೇಗೆ? ಈ ಅಂಶದ ನೆಲೆಯಲ್ಲಿ ಚರ್ಚೆಗಳು ನಡೆಯಬೇಕಿದೆ, ತೀರ್ಮಾನಗಳು ಆಗಬೇಕಾಗಿದೆ.

ಶಿಕ್ಷಣದ ಗುಣಾತ್ಮಕತೆಯನ್ನು ಸಾಧಿಸುವಲ್ಲಿ ಪ್ರಾಥಮಿಕ ಹಂತದ (ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು, ಪೋಷಕರು, ಎಸ್ ಡಿ ಎಂ ಸಿ, ಆಡಳಿತ ವರ್ಗ/ ಅಧಿಕಾರಿಗಳು /ನೀತಿ ರೂಪಕರು) ಮತ್ತು ದ್ವಿತೀಯ ಹಂತದ ಭಾಗೀದಾರರಾದ (ಹಿರಿಯ ವಿದ್ಯಾರ್ಥಿಗಳು, ಸ್ಥಳೀಯ ಸಂಸ್ಥೆಗಳು, ಜನಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳು,ಸಮುದಾಯ) ಪಾತ್ರ ಅತ್ಯಂತ ಮಹತ್ವವುಳ್ಳದಾಗಿದೆ. ಪ್ರತಿಯೊಬ್ಬ ಭಾಗೀದಾರರು ತಮ್ಮ ಹೊಣೆಗಾರಿಕೆಗಳನ್ನು ಸ್ವಾವಲೋಕನದ ಮೂಲಕ ಅರಿತುಕೊಂಡು ಬದ್ಧತೆಯಿಂದ ಹೆಚ್ಚು ಪರಿಣಾಮಕಾರಿಯಾಗಿ ತಮ್ಮ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತೆ ಮಾಡುವುದು ಈ ಮಾಡ್ಯೂಲ್ ನ ಪ್ರಧಾನ ಆಶಯ.

**ವಿದ್ಯಾರ್ಥಿಗಳು**

ಶಿಕ್ಷಣ ವ್ಯವಸ್ಥೆಯ ಕೇಂದ್ರ ಬಿಂದು ವಿದ್ಯಾರ್ಥಿಗಳು. ಇವರು ಶಾಲೆಗೆ ನಿಯಮಿತವಾಗಿ ಹಾಜರಾಗುವುದು. ಬದ್ಧತೆಯಿಂದ, ಸಕ್ರಿಯವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗುವಿಕೆಯಿಂದ ಗುಣಾತ್ಮಕ ಶಿಕ್ಷಣದ ಆಶಯವನ್ನು ಸಾಧಿಸುವುದಾಗಿದೆ..

**ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು**

ಶಿಕ್ಷಕರ ಪರಿಣತಿ, ಉತ್ಸಾಹ, ಬೋಧನಾ ಕೌಶಲ್ಯಗಳು, ಸಂಪನ್ಮೂಲ ಸೃಜನೆ, ಕ್ರೋಢೀಕರಣ, ನಾವೀನ್ಯಯುತ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಅನುಕೂಲಿಸುವುದು, ಮಕ್ಕಳನ್ನು ಅರ್ಥ ಮಾಡಿಕೊಳ್ಳುವುದು, ಅವರ ಸಮಸ್ಯೆಗಳಿಗೆ ಸ್ಪಂದಿಸುವುದು, ಆಪ್ತ ಸಮಾಲೋಚನೆ, ಮೌಲ್ಯಮಾಪನ, ನಿರಂತರ ವೃತ್ತಿ ಬೆಳವಣಿಗೆಯ ಪ್ರಯತ್ನಗಳು ಗುಣಾತ್ಮಕ ಶಿಕ್ಷಣದ ಅನುಷ್ಠಾನದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

**ಪೋಷಕರು ಮತ್ತು ಎಸ್ ಡಿ ಎಂ ಸಿ**

ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವಲ್ಲಿ ಪೋಷಕರು ಪ್ರಧಾನ ಪಾತ್ರವಹಿಸುತ್ತಾರೆ. ಶಾಲೆಯ ಚಟುವಟಿಕೆಗಳಿಗೆ ಬೆಂಬಲ, ಪ್ರೇರಣೆ, ಪ್ರೋತ್ಸಾಹ, ಸಹಕಾರ ನೀಡುವುದು ,ಪೋಷಕರ ಸಭೆಗಳಿಗೆ ಹಾಜರಾಗಿ ಮಕ್ಕಳ ಕಲಿಕೆಯ ಮೇಲ್ವಿಚಾರಣೆ, ಶಿಕ್ಷಕರೊಂದಿಗೆ ಮಾತುಕತೆ, ಮನೆಯಲ್ಲಿ ಮಕ್ಕಳಿಗೆ ಅಗತ್ಯವಾದ ಶೈಕ್ಷಣಿಕ ಅಗತ್ಯತೆಗಳ ಪೂರೈಕೆ ,ಕಲಿಕಾ ವಾತಾವರಣ, ಪೋಷಕರು ಮತ್ತು ಶಾಲೆಯ ಶಿಕ್ಷಕರ ನಡುವೆ ಉತ್ತಮ ಬೆಸುಗೆ ,ಬಾಂಧವ್ಯ ಈ ಅಂಶಗಳು ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುತ್ತವೆ.

**ಆಡಳಿತ ವರ್ಗ/ ಅಧಿಕಾರಿಗಳು /ನೀತಿ ನಿರೂಪಕರು**

ಶಾಲಾ ಶಿಕ್ಷಣದಲ್ಲಿ ಮಕ್ಕಳ ದಾಖಲಾತಿ, ಗುಣಾತ್ಮಕ ಶಿಕ್ಷಣದ ಅನುಷ್ಠಾನಕ್ಕೆ ಅಗತ್ಯವಾದ ನೀತಿ ನಿಯಮಗಳು, ಗೊಂದಲ ಪರಿಹಾರಕ್ಕೆ ಸೂಕ್ತ ನಿರ್ದೇಶನಗಳು{ಸಕಾಲದಲ್ಲಿ}ಇಲಾಖಾ ಸೂಚನೆಗಳು, ಸಂಪನ್ಮೂಲ ಸೌಲಭ್ಯಗಳ ಸಮಾನ ಹಂಚಿಕೆ, ಶಿಕ್ಷಕರ ತರಬೇತಿ, ಪಠ್ಯಕ್ರಮ ಅಭಿವೃದ್ಧಿ, ಶಾಲೆಗೆ ಭೌತಿಕ ಸೌಲಭ್ಯಗಳು, ಪರಿಣಾಮಕಾರಿ ಕಲಿಕಾ ವಾತಾವರಣ ನಿರ್ಮಾಣದಲ್ಲಿ ಆಡಳಿತ ವರ್ಗ ಪ್ರಮುಖ ಪಾತ್ರ ವಹಿಸುತ್ತದೆ.

ಸಮುದಾಯದ ಸಹಭಾಗಿತ್ವ

ಸಮುದಾಯದ ಒಂದು ಭಾಗವೇ ಶಾಲೆ. ಸಮುದಾಯದ ಮಕ್ಕಳಿಗಾಗಿ ಶಾಲೆ . ಸಮುದಾಯದ ಜನರ ಜಾಗೃತಿ (ವಿವಿಧ ವಿಷಯಗಳಲ್ಲಿ ಸ್ವಚ್ಛತೆ, ನೈರ್ಮಲ್ಯ, ಉತ್ತಮ ಆರೋಗ್ಯ ಅಭ್ಯಾಸಗಳು, ಶಿಕ್ಷಣದ ಮಹತ್ವ, ಕಂದಾಚಾರ, ಮೂಡನಂಬಿಕೆಗಳ ಬಗ್ಗೆ ಜಾಗೃತಿ ) ಶಾಲೆಯ ಚಟುವಟಿಕೆಗಳ ಭಾಗವಾಗಬೇಕು. ಶಾಲೆಯ ಪಠ್ಯ, ಸಹಪಠ್ಯದಂತಹ ಚಟುವಟಿಕೆಗಳ ನಿರ್ವಹಣೆಗೆ ಅಗತ್ಯ ಬೆಂಬಲ, ಪ್ರೋತ್ಸಾಹ ಪ್ರೇರಣೆ ಸಮುದಾಯದಿಂದ ಶಾಲೆಗೆ ದೊರೆಯುವಂತಾಗಬೇಕು. ಸ್ಥಳೀಯ ಸಂಪನ್ಮೂಲಗಳು, ಸಂಪನ್ಮೂಲ ವ್ಯಕ್ತಿಗಳನ್ನು ಮುಖ್ಯ ಶಿಕ್ಷಕರು ಬಳಸಿಕೊಳ್ಳಲು ಮುಂದಾಗಬೇಕು.( ಗ್ರಂಥಾಲಯ, ಕುಡಿಯುವ ನೀರಿನ ಸೌಲಭ್ಯ ಇತ್ಯಾದಿ)

**ಹಳೆಯ ವಿದ್ಯಾರ್ಥಿಗಳು**

ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹಳೆಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಸಂಸ್ಥೆ ಮತ್ತು ಹೊಸ ವಿದ್ಯಾರ್ಥಿಗಳೊಂದಿಗೆ ಸಂಪರ್ಕವನ್ನು ಕಾಪಾಡಿಕೊಳ್ಳಲು, ಬೆಂಬಲ ನೀಡಲು ಸಹಕಾರಿಯಾಗಿವೆ. ಶಾಲೆಗಳಲ್ಲಿ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸುದ್ದಿಪತ್ರಗಳು ಅಥವಾ ನಿಯತಕಾಲಿಕೆಗಳನ್ನು ಪ್ರಕಟಿಸುವುದು ಮತ್ತು ಸಂಸ್ಥೆಗೆ ದೇಣಿಗೆ ಸಂಗ್ರಹಿಸುವ ಮೂಲಕ, ದಾನ ನೀಡುವ ಮೂಲಕ, ಶಾಲೆಯ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

**ಸ್ಥಳೀಯ ಸಂಸ್ಥೆಗಳು**

ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳು ಉತ್ಕೃಷ್ಟವಾಗಿ ಮಕ್ಕಳ ಕಲಿಕೆಯನ್ನು ಬೆಂಬಲಿಸುವ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರ ನಿರ್ಣಾಯಕ.

**ಸ್ವಯಂ ಸೇವಾ ಸಂಸ್ಥೆಗಳು**

ಶಾಲಾಭಿವೃದ್ಧಿ ಮತ್ತು ಮಕ್ಕಳ ಕಲಿಕೆಯನ್ನು ಸಂಪನ್ನಗೊಳಿಸಲು ಶಿಕ್ಷಕರು ವೃತ್ತಿಪರತೆಯನ್ನು ಹೆಚ್ಚಿಸಿಕೊಳ್ಳಲು ಕೆಲವು ಸ್ವಯಂಸೇವಾ ಸಂಸ್ಥೆಗಳು ಸಹಕಾರ ನೀಡಬಹುದು ಇವರನ್ನು ಗುಣಾತ್ಮಕ ಶಿಕ್ಷಣದ ಅನುಷ್ಠಾನಕ್ಕೆ ಪೂರಕವಾಗಿ ಬಳಸಿಕೊಳ್ಳುವುದು ಹೇಗೆ?

ಹೀಗೆ ವಿವಿಧ ನೆಲೆಗಳಲ್ಲಿ ವಿವಿಧ ಆಯಾಮಗಳಿಂದ ಎಲ್ಲಾ ಭಾಗೀದಾರರೂ ಗುಣಾತ್ಮಕ ಶಿಕ್ಷಣವನ್ನು ಮಕ್ಕಳು ನ್ಯಾಯಯುತವಾಗಿ ಪಡೆಯುವ ನಿಟ್ಟಿನಲ್ಲಿ ತಮ್ಮ ಪಾತ್ರ /ಕರ್ತವ್ಯ ನಿರ್ವಹಣೆ ಕುರಿತಂತೆ ಚಿಂತಿಸಿ ಸಾಮೂಹಿಕ ಪ್ರಯತ್ನಗಳ ಮೂಲಕ ಕಾರ್ಯೋನ್ಮುಖರಾಗುವಂತೆ ಮಾಡುವುದು ಮಾಡ್ಯೂಲನ ಆಶಯವಾಗಿದೆ.

**1.1 ವ್ಯಾಪ್ತಿ :**

ಗುಣಾತ್ಮಕ ಶಿಕ್ಷಣದ ವ್ಯಾಪ್ತಿ ವಿಶಾಲವಾದದು. ಈ ಮಾಡ್ಯೂಲ್ ಅನ್ನು ಆರಂಭಿಕ ಶಿಕ್ಷಣದಿಂದ ಹನ್ನೆರಡನೇ ತರಗತಿಯ ಮಕ್ಕಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸಿದ್ಧಪಡಿಸಿದ್ದು ಶಿಕ್ಷಣ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಭಾಗೀದಾರರೂ ಅಂದರೆ ಶಾಲಾ ಸಿಬ್ಬಂದಿ, ಮಕ್ಕಳು, ಪೋಷಕರು ಸ್ಥಳೀಯ ಸಂಸ್ಥೆಗಳು (ಗ್ರಾಮ ಪಂಚಾಯಿತಿ, ಶಾಲಾ ಭಿವೃದ್ಧಿ ಸಮಿತಿ ,ಜನಪ್ರತಿನಿಧಿಗಳು ,ಸ್ವಯಂ ಸೇವಾ ಸಂಸ್ಥೆಗಳು)ನೀತಿ ನಿರೂಪಕರು, ಆಡಳಿತಗಾರರು ಎಲ್ಲರೂ ತಮ್ಮ ಹೊಣೆಗಾರಿಕೆಗಳನ್ನು ಅರಿತು ಕಾರ್ಯನಿರ್ವಹಿಸಿದಾಗ ಶಿಕ್ಷಣದ ಗುಣಾತ್ಮಕತೆ ಹೆಚ್ಚುತ್ತದೆ. ಗುಣಾತ್ಮಕ ಶಿಕ್ಷಣವನ್ನು

ಖಚಿತಪಡಿಸುವ ನಿಟ್ಟಿನಲ್ಲಿ ತಮ್ಮ ಹೊಣೆಗಾರಿಕೆಯನ್ನು ಬದ್ಧತೆಯಿಂದ ನಿರ್ವಹಿಸಬೇಕಾಗಿದೆ. ಈ ಅಂಶಗಳ ಮೇಲೆ ತರಬೇತಿ ಸಾಹಿತ್ಯವು ಬೆಳಕು ಚೆಲ್ಲುತ್ತದೆ.

ಶೈಕ್ಷಣಿಕ ಉದ್ದೇಶಗಳ ಸಾಧನೆಗೆ ವಿವಿಧ ಭಾಗೀದಾರರ ಸಹಕಾರ ಸಹಭಾಗಿತ್ವ ಅತ್ಯಗತ್ಯ ವಿವಿಧ ಹಂತದ ಶೈಕ್ಷಣಿಕ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಹಲವಾರು ಸನ್ನಿವೇಶಗಳಲ್ಲಿ ವಿವಿಧ ರೀತಿಯ ಸಹಕಾರ ಸಹಭಾಗಿತ್ವದ ಅನನ್ಯತೆಯನ್ನು ಮನಗಾಣುವರು. ಆಯಾ ಸಂದರ್ಭಗಳಲ್ಲಿ ಅತ್ಯಗತ್ಯವಿರುವ ಭಾಗೀದಾರರನ್ನು ಗುರುತಿಸುವ, ಒಳಗೊಳ್ಳುವ, ಸಹಯೋಗದಲ್ಲಿ ಕಾರ್ಯನಿರ್ವಹಿಸುವ ಮನೋಧೋರಣೆ ಹಾಗೂ ಮನೋಭೂಮಿಕೆ ಹಾಗೂ ಕೌಶಲ್ಯಗಳು ಅತ್ಯಗತ್ಯ. ಗುಣಾತ್ಮಕ ಶಿಕ್ಷಣದ ಅಗತ್ಯ ಹಾಗೂ ಅದರ ಸುಧಾರಣೆಗೆ ಅಗತ್ಯವಿರುವ ಸಾಮೂಹಿಕ ಪ್ರಯತ್ನ ಹಾಗೂ ಆ ಸಾಮೂಹಿಕ ಪ್ರಯತ್ನವನ್ನು ಸಂಘಟಿಸುವಲ್ಲಿ ಶಿಕ್ಷಣ ಇಲಾಖೆಯ ವಿವಿಧ ಹಂತದ ಅಧಿಕಾರಿಗಳ ಪಾತ್ರದ ಕುರಿತು ಈ ಮಾಡ್ಯೂಲ್ ಅರಿವು ಮೂಡಿಸಬಲ್ಲದು.

**1.2 ಉದ್ದೇಶಗಳು:**

**1. ಶಿಕ್ಷಣ ವ್ಯವಸ್ಥೆಯ ಎಲ್ಲಾ ಭಾಗೀದಾರರು ತಮ್ಮ ಹೊಣೆಗಾರಿಕೆಗಳನ್ನು ಆಳವಾಗಿ ಚಿಂತಿಸಿ ಕ್ರಿಯಾಶೀಲರಾಗುವಂತೆ ಮಾಡುವುದು.**

2.ಸಹಭಾಗಿತ್ವದ ಸಮೂಹ ಶಕ್ತಿಯ ವಿವಿಧ ಆಯಾಮಗಳನ್ನು ಅವಲೋಕಿಸಿ ಸಂಘಟಿತ ಪ್ರಯತ್ನಗಳನ್ನು ಅನುಷ್ಠಾನಗೊಳಿಸುವ ಕೌಶಲಗಳನ್ನು ಬೆಳೆಸುವುದು

3.ಶೈಕ್ಷಣಿಕ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಶಿಕ್ಷಣದ ನೀತಿ-ನಿಯಮಗಳನ್ನು ಶಾಲಾ ಸನ್ನಿವೇಶಕ್ಕೆ ಅಳವಡಿಸುವ ಕ್ಷಮತೆ ಹಾಗೂ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.

4.ಭಾಗೀದಾರರೊಂದಿಗೆ ಸಹಸಂಬಂಧಗಳನ್ನು ಸ್ಥಾಪಿಸಲು, ಸುಸ್ಥಿರಗೊಳಿಸಲು ಅಗತ್ಯವಿರುವ ಮನೋಭೂಮಿಕೆಗಳನ್ನು ರೂಪಿಸುವುದು ಹಾಗೂ ಪೂರ್ವಾಗ್ರಹಗಳಿಂದ ಮುಕ್ತರಾಗಿಸುವುದು

**ಶಿಕ್ಷಣ ಮತ್ತು ಸಾಂಸ್ಥಿಕ ಘಟಕವಾಗಿ ಶಾಲೆ :**

ನಿರೀಕ್ಷಿತ ಕಲಿಕಾ ಫಲಗಳು

- ಶಿಕ್ಷಣದ ಪ್ರಾಮುಖ್ಯತೆ ಮತ್ತು ಸಾಮಾಜಿಕ ಸಂಸ್ಥೆಯಾಗಿ ಶಾಲೆ ನಿರ್ವಹಿಸುವ ಕಾರ್ಯದ ಬಗ್ಗೆ ಅರಿಯುವರು.
- ಭಾರತದಲ್ಲಿ ಶಾಲಾ ಶಿಕ್ಷಣದ ಪ್ರಸ್ತುತ ಸ್ಥಿತಿಯ ಅವಲೋಕನ ಮಾಡುವರು.
- ವ್ಯವಸ್ಥೆಯು ಎದುರಿಸುತ್ತಿರುವ ಸವಾಲುಗಳನ್ನು ಅರಿತು ಪರಿಸ್ಥಿತಿಯನ್ನು ಸುಧಾರಿಸಲು ಮಾರ್ಗೋಪಾಯಗಳನ್ನು ಕಂಡುಕೊಳ್ಳುವರು.

ಮಗುವಿನ 3ನೇ ವಯಸ್ಸಿನಿಂದ 18ನೇ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣ ನೀಡಲು ದೇಶದಾದ್ಯಂತ ನಿರಂತರ ಪ್ರಯತ್ನಗಳು ಔಪಚಾರಿಕವಾಗಿ ನಡೆಯುತ್ತಿವೆ . ಸುಮಾರು 15 -20 ವರ್ಷ ಪಡೆಯುವ ಶಿಕ್ಷಣವು ಬದುಕಿಗೆ ಹೇಗೆ ಬೆಳಕಾಗಬಲ್ಲದು? ದಾರ್ಶನಿಕರು ಶಿಕ್ಷಣದ ಬಗ್ಗೆ ಏನನ್ನು ಹೇಳಿದ್ದಾರೆ ? ಔಪಚಾರಿಕ ಶಿಕ್ಷಣ ನೀಡುತ್ತಿರುವ ನಾವುಗಳು ನಮ್ಮ ಸ್ವಂತ ಮಕ್ಕಳಿಗೆ ನೀಡಿದಷ್ಟೇ ಬೆಂಬಲವನ್ನು ಇತರೆ ಎಲ್ಲಾ ಮಕ್ಕಳಿಗೂ ದೊರಕಿಸುತ್ತಿದ್ದೇವೆಯೇ ? ಇಲ್ಲವಾದಲ್ಲಿ ಈ ಬೆಂಬಲ ದೊರಕುವಂತಾಗಲು ಏನು ಮಾಡಬೇಕು ? ಎಂಬೆಲ್ಲಾ ಅಂಶಗಳ ಬಗ್ಗೆ ಚರ್ಚಿಸುವ ಮುನ್ನ ದಾರ್ಶನಿಕರ, ಶಿಕ್ಷಣ ತಜ್ಞರ ಹೇಳಿಕೆಗಳನ್ನು ಒಮ್ಮೆ ಗಮನಿಸೋಣ.

☞“ ಜೀವನವೇ ಶಿಕ್ಷಣ, ಜೀವನಕ್ಕಾಗಿ ಶಿಕ್ಷಣ”--ಜಾನ್ ಡ್ಯೂಯಿ

☞ ಶಿಕ್ಷಣವೆಂದರೆ ವ್ಯಕ್ತಿತ್ವ ನಿರ್ಮಾಣ, ವ್ಯಕ್ತಿತ್ವ ನಿರ್ಮಾಣದ ಮೂಲಕ ಚಾರಿತ್ರ್ಯ ನಿರ್ಮಾಣ. ಚಾರಿತ್ರ್ಯ ನಿರ್ಮಾಣದ ಮೂಲಕ ಮಾತ್ರವೇ ಭಾರತ ನಿರ್ಮಾಣ “--ಸ್ವಾಮಿ ವಿವೇಕಾನಂದ

☞ “ಸಚ್ಚಾರಿತ್ರ್ಯದ ಬೆಳವಣಿಗೆಯೇ ಶಿಕ್ಷಣದ ಆರಂಭ”-- ಮಹಾತ್ಮ ಗಾಂಧಿ

☞ "ವಿದ್ಯೆ ಗುರುಗಳ ಗುರು "-ಭೃತೃಹರಿ

☞ **"ದೈಹಿಕ , ಮಾನಸಿಕ ಹಾಗೂ ಆಧ್ಯಾತ್ಮಿಕ ಪ್ರಗತಿಗೆ ಇಂಬು ಕೊಡದ ಶಿಕ್ಷಣ ಅಪೂರ್ಣ"-- ಡಾಕ್ಟರ್ ರಾಧಾಕೃಷ್ಣನ್**

☞" ಶಿಕ್ಷಣದ ಬೇರುಗಳು ಕಹಿ ಇರಬಹುದು ಆದರೆ ಅದರ ಫಲ ಸಿಹಿಯಾಗಿಯೇ ಇರುತ್ತದೆ"—ಅರಿಸ್ಟಾಟಲ್

**ಆತ್ಮೀಯರೇ, ಮಹಾನ್ ವ್ಯಕ್ತಿಗಳ ಶಿಕ್ಷಣ ಸಂಬಂಧಿತ ಈ ಮೇಲಿನ ವ್ಯಾಖ್ಯೆಗಳನ್ನು ಒಮ್ಮೆ ಆಲೋಚಿಸಿ ಇವುಗಳ ಬಗ್ಗೆ ನಿಮ್ಮ ಒಳನೋಟಗಳನ್ನು ದಾಖಲಿಸಿ.**

ಶಿಕ್ಷಣವು ಸರ್ವಾಂಗೀಣ ಅಭಿವೃದ್ಧಿಗೆ ಬುನಾದಿ, ಜ್ಞಾನವನ್ನು ಪಡೆಯಲು ಜೀವನದಲ್ಲಿ ಆತ್ಮವಿಶ್ವಾಸ ಸುಧಾರಿಸಲು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಉತ್ತಮ ನಾಗರೀಕರಾಗಲು , ಒಟ್ಟಾರೆ ಮನುಕುಲದ ಬೆಳವಣಿಗೆಗೆ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಈ ಮೇಲಿನ ಮಹನೀಯರ ಹೇಳಿಕೆಗಳು ಸಾಕ್ಷೀಕರಿಸುತ್ತವೆ.

**ಹಾಗಾದರೆ ಸಮಾಜ ಯಾವ ರೀತಿಯ ಶಿಕ್ಷಣವನ್ನು ನಿರೀಕ್ಷಿಸುತ್ತದೆ ?**

**ಗುಣಾತ್ಮಕ ಶಿಕ್ಷಣ :**

What is meant quality education?

Quality education is defined one that focuses on the learner to prepare them for life not just for assessments.

ಒಬ್ಬ ವ್ಯಕ್ತಿಯನ್ನು ಸಮಾಜದ ಉತ್ತಮ ನಾಗರೀಕನನ್ನಾಗಿಸುವುದೇ ಗುಣಾತ್ಮಕ ಶಿಕ್ಷಣದ ಉದ್ದೇಶ. ವ್ಯಕ್ತಿಯು ತಾನು ಪಡೆದ ಶಿಕ್ಷಣದಿಂದ ಸಮಾಜಕ್ಕೆ ನೀಡುವ ಕೊಡುಗೆಯು ಆ ವ್ಯಕ್ತಿ ಪಡೆದ ಗುಣಾತ್ಮಕ ಶಿಕ್ಷಣದಿಂದ ಮಾತ್ರ.ಧ

ಗುಣಮಟ್ಟದ ಶಿಕ್ಷಣವು ಪಠ್ಯಪುಸ್ತಕಗಳು ಮತ್ತು ಪಠ್ಯಕ್ರಮವನ್ನು ಮೀರಿದ್ದು. ಬೌದ್ಧಿಕ ಕುತೂಹಲ, ಸೃಜನಶೀಲತೆ ಮತ್ತು ವೈಯಕ್ತಿಕ ಬೆಳವಣಿಗೆಯನ್ನು ಹೆಚ್ಚಿಸುತ್ತದೆ ಮತ್ತು ಅರ್ಥಪೂರ್ಣ ಜೀವನಕ್ಕೆ ಕಾರಣವಾಗುತ್ತದೆ. ಗುಣಾತ್ಮಕ ಶಿಕ್ಷಣದಲ್ಲಿ ಜೀವನ ಕೌಶಲಗಳು ನಿಗದಿಪಡಿಸಿದ ವಿಷಯಗಳು ಹಾಗೂ ಅಮೂರ್ತ ಪರಿಕಲ್ಪನೆಗಳನ್ನು ಸರಳವಾಗಿ ಅರ್ಥಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಕೂಲಿಸುವ ಸಾಮರ್ಥ್ಯದ ಮೇಲೆ ಕೇಂದ್ರೀಕೃತವಾಗಿರುತ್ತದೆ. ಇದು ಕಂಠಪಾಠ ಮುಕ್ತವಾಗಿದ್ದು, ನಿಜ ಜೀವನದ ಅನುಭವಗಳೊಂದಿಗೆ ಅನ್ವಯಿಸಿಕೊಂಡು ಕಲಿಯುವುದಾಗಿರುತ್ತದೆ. ಇಲ್ಲಿ ಪಡೆಯುವ ತಿಳುವಳಿಕೆ, ಮಾಡಿಕೊಳ್ಳುವ ವಿಶ್ಲೇಷಣೆ, ಹೊಸ ಜ್ಞಾನದ ರಚನೆ ಶಾಶ್ವತವಾಗಿ ಬೇರೂರುತ್ತದೆ. ಈ ನಿಟ್ಟಿನಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಅನುಕೂಲಿಸುವ ಸಹಜ ಸನ್ನಿವೇಶ ರೂಪುಗೊಳ್ಳಬೇಕಿದೆ.

ಗುಣಾತ್ಮಕ ಶಿಕ್ಷಣನೀಡುವಲ್ಲಿ ಸಹಜ ಸನ್ನಿವೇಶ ಸೃಷ್ಟಿಸಲು ಸಾಧ್ಯವಿದೆಯಲ್ಲವೇ ?

ಚರ್ಚಿಸಿ

**2.1 ಸಾಮಾಜಿಕ ಸಂಸ್ಥೆಯಾಗಿ ಶಾಲೆ :** ಕಲಿಕೆಯು ಒಂದು ಸುಂದರ ಅಪಘಾತವಿದ್ದಂತೆ ಸಹಜವಾಗಿ ಸದಾ ಕಾಲ ನಡೆಯು ಪ್ರಕ್ರಿಯೆ ಎಂದಾದರೆ ಅದಕ್ಕೆ ನಿರ್ದಿಷ್ಟ ಸ್ಥಳದ ಅವಶ್ಯಕತೆಯಾದರೂ ಏಕೆ ? ಈ ಪ್ರಶ್ನೆಗಳಿಗೆ ಆಳವಾಗಿ ಆಲೋಚಿಸುತ್ತಾ ಪ್ರಸ್ತುತ ಔಪಚಾರಿಕ ಶಿಕ್ಷಣವನ್ನು ಹೋಲಿಸಿಕೊಂಡಾಗ ಒಂದು ಗೊತ್ತುಪಡಿಸಿದ ಸ್ಥಳದಲ್ಲಿ ಔಪಚಾರಿಕವಾಗಿ ಕಲಿಕೆ ನಡೆಸುವ ಸ್ಥಳವೇ ಶಾಲೆಯಾಗಿದೆಯಾದರೂ ಸಮಾಜದಿಂದ ಹೊರತಾಗಿಲ್ಲ.

ಹಾಗಾದರೆ ಶಾಲೆ ಸಮುದಾಯದ ಅವಿಭಾಜ್ಯ ಅಂಗವೇ ? ಚರ್ಚಿಸಿ

**ಶಾಲೆಯು ಸಾಮಾಜಿಕ ಸಂಸ್ಥೆ ಎಂಬುದನ್ನು ಈ ಕೆಳಗಿನ ಅಂಶಗಳಿಂದ ಸ್ಪಷ್ಟ ಪಡಿಸಬಹುದು :-**

• ವಿವಿಧ ಕುಟುಂಬ ವಿವಿಧ ಸಮುದಾಯಗಳಿಂದ ಮಕ್ಕಳು ಶಾಲೆಗೆ ಬರುತ್ತಾರೆ. ಹಾಗೆ ಶಾಲೆಗೆ ಬರುವ ಮಕ್ಕಳ ಹಿನ್ನೆಲೆ ಭಿನ್ನವಾಗಿರುವುದರಿಂದ ಅವರ ನಡುವೆ ನಡೆಯುವ ಅಂತರಕ್ರಿಯೆ ಸಾಮಾಜಿಕ ಸ್ವರೂಪವನ್ನು ಪಡೆಯುತ್ತದೆ. ಕುಟುಂಬದ ಸಂರಕ್ಷಿತ ಜೀವನದಿಂದ ಹೊರಬಂದು ಜೀವಿಸುವುದನ್ನು ಶಾಲೆಗಳು ಕಲಿಸುತ್ತವೆ.

• ಭಿನ್ನ ಸಮಾಜದಿಂದ ಬರುವ ಮಕ್ಕಳು ಶಾಲೆಯಲ್ಲಿ ಸಮ ವಯಸ್ಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶಾಲೆಯಲ್ಲಿ ಮಕ್ಕಳು ಅಪರಿಚಿತ ಪರಿಸರವನ್ನು ಪಡೆದು ಹೊಸ ರೀತಿಯ ಪ್ರಭಾವಗಳಿಗೆ ಗುರಿಯಾಗುತ್ತಾರೆ. ಇದರಿಂದ ಅವರ ಭವಿಷ್ಯದಲ್ಲಿ ವಹಿಸಬೇಕಾದ ವಯಸ್ಕ ಪಾತ್ರಗಳನ್ನು ಪೂರ್ವಭಾವಿಯಾಗಿ ಕಲ್ಪಿಸಿಕೊಳ್ಳಬಹುದು.

• ವಿವಿಧ ಶ್ರೇಣಿಯ ವ್ಯಕ್ತಿಗಳಿದ್ದರೂ ಸಹಜೀವಿಗಳಂತೆ ಬೆಳೆಯುವ ಅವಕಾಶವನ್ನು ಮಕ್ಕಳು ಶಾಲೆಗಳಲ್ಲಿ ಪಡೆಯುತ್ತಾರೆ. ಅಲ್ಲದೆ ಹಿರಿಯರೊಂದಿಗೆ ಗೌರವದಿಂದಲೂ ಕಿರಿಯರೊಂದಿಗೆ ಪ್ರೀತಿ-ವಿಶ್ವಾಸಗಳಿಂದಲೂ ಜೀವಿಸಲು ಅಗತ್ಯವಾದ ಸಾಮಾಜಿಕ ಕೌಶಲಗಳ ತರಬೇತಿಯನ್ನು ಶಾಲೆ ಒದಗಿಸುತ್ತದೆ.

• ಕುಟುಂಬ ಮತ್ತು ಸಮೂಹಗಳಂತೆ ಶಾಲೆಯು ತಮ್ಮದೇ ಆದ ಉಪ ಸಂಸ್ಕೃತಿಯನ್ನು ಹೊಂದಿರುತ್ತದೆ, ಇದು ಶಾಲೆಯು ವಿವಿಧ ಮಕ್ಕಳ ನಡುವೆ ಏಕತೆಯನ್ನು ತರಲು ಪ್ರಯತ್ನಿಸುತ್ತವೆ.

• ಶಾಲಾ ಜೀವನದಲ್ಲಿ ವಿದ್ಯಾರ್ಥಿಗಳು ಸಾಧನೆಯ ಮೂಲಕ ಕಲಿಕೆಯನ್ನು ತೋರಬೇಕಾಗುತ್ತದೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೊಂದಿಗೆ ವ್ಯಕ್ತಿತ್ವ ವಿಕಸನ ಚಟುವಟಿಕೆಗಳನ್ನು ನಾಯಕತ್ವ ತರಬೇತಿಯ ಚಟುವಟಿಕೆಗಳನ್ನು ವೃತ್ತಿ ಆಯ್ಕೆ ಸಿದ್ಧತೆಗೆ ಬೇಕಾದ ಚಟುವಟಿಕೆಗಳನ್ನು ಶಾಲೆಗಳು ಒದಗಿಸುತ್ತವೆ.

• ಶಾಲಾ ಆರಂಭ ಮುನ್ನ ಊಟದ ವಿರಾಮ ಮತ್ತು ಶಾಲಾ ನಂತರದ ಸಮಯದಲ್ಲಿ ಮಕ್ಕಳು ಒಟ್ಟಿಗೆ ಇರುತ್ತಾ ಅನೌಪಚಾರಿಕ ಸನ್ನಿವೇಶಗಳಲ್ಲಿ ಕ್ರೀಡೆ, ಸಹ ಭೋಜನ, ಹರಟೆ, ಸಮೂಹ ಅಧ್ಯಯನ ಚರ್ಚೆಗಳಲ್ಲಿ ತೊಡಗುತ್ತಾ ಸಾಮಾಜಿಕ ಸಂಬಂಧವನ್ನು ಹೆಚ್ಚಿಸಿಕೊಳ್ಳುತ್ತಾರೆ.

ಶಾಲೆಯು ಒಂದು ಸಾಮಾಜಿಕ ಸಂಸ್ಥೆಯಾಗಲು ತನ್ನದೇ ಆದ ಒಂದು ಸಂರಚನೆಯನ್ನು ಹೊಂದಿರುತ್ತದೆ. ಶಾಲೆಯು ಸಮಾಜದಿಂದ ಹೊರಗಿರಲು ಸಾಧ್ಯವಿಲ್ಲ ಆದ್ದರಿಂದ ಶಾಲೆಗಳು ಸಮಾಜದೊಡನೆ ಗಾಢವಾದ ಸಂಪರ್ಕವನ್ನು ಇಟ್ಟುಕೊಂಡಿರುವುದು. ಶಿಕ್ಷಣದ ಧ್ಯೇಯೋದ್ದೇಶಗಳೂ ಸಮಾಜದಿಂದಲೇ ರೂಪಿತವಾಗುತ್ತವೆ. ಈ ರೀತಿ ಶಾಲೆ ಸಮಾಜದ ಪ್ರತಿಬಿಂಬವಾಗಿರುವ ಕಾರಣ ಮಗು ಪುನಃ ಶಾಲೆಯಿಂದ ಸಮಾಜಕ್ಕೆ ಹಿಂದಿರುಗುವುದರಿಂದ ಶಾಲೆಯನ್ನು ಸಮಾಜದಿಂದ ಹೊರಗಿಟ್ಟು ನೋಡಲಾಗುವುದಿಲ್ಲ ಸಾಮಾಜಿಕ ಸಂಸ್ಥೆಯಾಗಿರುವ ಶಾಲೆ ಕೇವಲ ಶಿಕ್ಷಕರು ಮಕ್ಕಳು ಮತ್ತು ಇಲಾಖೆಯಿಂದ ಮಾತ್ರ ನಡೆಯುವುದಿಲ್ಲ ಶಾಲೆಯಲ್ಲಿ ಕಲಿಕಾ ಮಟ್ಟ ಕುಸಿದರೆ ಇಲಾಖೆ ಮತ್ತು ಶಿಕ್ಷಕರಿಂದ ಮಾತ್ರ ಮೇಲೆತ್ತಲು ಸಾಧ್ಯವಿಲ್ಲ ವಿವಿಧ ರೀತಿಯ ವಿವಿಧ ವಯೋಮಾನದ ವಿವಿಧ ಸಮಸ್ಯೆಗಳಿರುವ ಮಕ್ಕಳಿಗೆ ಇಲಾಖೆ ಮತ್ತು ಶಿಕ್ಷಕರು ಮಾತ್ರ ಪರಿಹಾರ ನೀಡಲು ಸಾಧ್ಯವಿಲ್ಲ ಶಾಲಾ ಗುಣಮಟ್ಟ ಸುಧಾರಣೆಯಾಗಬೇಕಾದರೆ ಹೀಗಿರುವ ಪರಿಸ್ಥಿತಿ ಬದಲಾಗಬೇಕಾದರೆ ಮಕ್ಕಳ ಕಲಿಕಾ ಮಟ್ಟ ವಯೋಮಾನಕ್ಕೆ ತಕ್ಕಂತೆ ಸುಧಾರಿಸಬೇಕಿದೆ.

**2.2 ಭಾರತದಲ್ಲಿ ಶಾಲಾ ಶಿಕ್ಷಣದ ಪ್ರಸ್ತುತ ಸ್ಥಿತಿ, ಸವಾಲುಗಳು ಮತ್ತು ಸುಧಾರಿಸಲು ಸಲಹೆಗಳು :-** ಶಾಲಾ ಶಿಕ್ಷಣವು ಯಾವುದೇ ರಾಷ್ಟ್ರದ ಅಡಿಪಾಯವಾಗಿದೆ. ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯು ಸ್ವಾತಂತ್ರದ ನಂತರ ಬಹಳಷ್ಟು ಸುಧಾರಿಸಿದೆ ಆದಾಗ್ಯೂ ಶಿಕ್ಷಣ ವ್ಯವಸ್ಥೆಯಲ್ಲಿ ಇನ್ನೂ ಅನೇಕ ಸವಾಲುಗಳು ನಮ್ಮ ಮುಂದಿವೆ. ಈ ಸವಾಲುಗಳನ್ನು ಸುಧಾರಿಸಲು ಸರ್ಕಾರದ ಉಪಕ್ರಮಗಳಷ್ಟೇ ಅಲ್ಲದೆ ಸಮುದಾಯ ಪೋಷಕರು ಸಮುದಾಯ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಕಾರ ಅತ್ಯಗತ್ಯ. ಭಾರತದಲ್ಲಿನ ಶಾಲಾ ಶಿಕ್ಷಣದ ಪ್ರಸ್ತುತ ಸ್ಥಿತಿಯನ್ನು ನಾವು ವಿವಿಧ ವರದಿಗಳ ( NAS, ASER, FLS, FLN) ಆಧಾರದಿಂದ ನೋಡಬಹುದಾಗಿದ್ದು ಭಾರತದಲ್ಲಿ ಶಾಲಾ ಶಿಕ್ಷಣದ ಪ್ರಸ್ತುತ ಸ್ಥಿತಿಯ ಅವಲೋಕನ ಭಾರತದಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಸರ್ಕಾರದಿಂದ ಸಾಕಷ್ಟು ಪ್ರಯತ್ನಗಳು ಸಾಗಿವೆ. ಭಾರತದಲ್ಲಿ ಶಾಲಾ ಶಿಕ್ಷಣದ ಸ್ಥಿತಿಯನ್ನು ತಿಳಿಸುವ ಅವಲೋಕನಗಳ ವರದಿಗಳ ಅಂಕಿ ಅಂಶಗಳ ಆಧಾರದಂತೆ ಅನೇಕ ಸವಾಲುಗಳು ನಮ್ಮ ಕಣ್ಣ ಮುಂದಿವೆ.

ಹಾಗಾದರೆ ಭಾರತ ಎದುರಿಸುತ್ತಿರುವ ಶಾಲಾ ಶಿಕ್ಷಣದ ಸವಾಲುಗಳು ಯಾವುವು? ಪಟ್ಟಿಮಾಡಿ

**-: ಶಾಲಾ ಶಿಕ್ಷಣದ ಸವಾಲುಗಳು :-**

**1. ವಿದ್ಯಾರ್ಥಿಗಳ ಗೈರುಹಾಜರಿ**

**2. ಶಿಕ್ಷಣಕ್ಕೆ ಪ್ರವೇಶದ ಕೊರತೆ**

**3. ಕಡಿಮೆ ಗುಣಮಟ್ಟದ ಶಿಕ್ಷಣ**

**4. ಲಿಂಗ ಅಸಮಾನತೆ**

**5. ಕಳಪೆ ಮೂಲಸೌಕರ್ಯ ಮತ್ತು ಸೌಲಭ್ಯಗಳು**

1) ಹೆಚ್ಚಿನ ಡ್ರಾಪ್‌ಔಟ್ ದರಗಳು :-

ಇತ್ತೀಚೆಗೆ ಪ್ರಾಥಮಿಕ ಹಂತದಲ್ಲಿ ಕಡಿಮೆಯಾದರೂ, , ವಿಶೇಷವಾಗಿ ಮಾಧ್ಯಮಿಕ ಮತ್ತು ಹೈಯರ್ ಸೆಕೆಂಡರಿ ಹಂತದ ಶಿಕ್ಷಣದಲ್ಲಿ ಹೆಚ್ಚಿನ ಡ್ರಾಪ್‌ಔಟ್ ಪ್ರಮಾಣವು ಮತ್ತೊಂದು ಪ್ರಮುಖ ಸವಾಲಾಗಿದೆ. ಬಡತನ, ಆಸಕ್ತಿಯ ಕೊರತೆ, ಕೌಟುಂಬಿಕ ಕಲಹ ಮತ್ತು ತಮ್ಮ ಕುಟುಂಬವನ್ನು ಪೋಷಿಸಲು ಕೆಲಸ ಮಾಡುವ ಅಗತ್ಯದಿಂದಾಗಿ ಅನೇಕ ಮಕ್ಕಳು ಶಾಲೆಯನ್ನು ಬಿಡುತ್ತಾರೆ.

**ಚಿಂತಿಸಿ**

**ಮಕ್ಕಳು ಶಿಕ್ಷಣದಿಂದ ಹೊರಗುಳಿಯಲು ಕಾರಣಗಳೇನು ?**

2) **ಶಿಕ್ಷಣಕ್ಕೆ ಪ್ರವೇಶದ ಕೊರತೆ :-**ಪ್ರಮುಖ ಸವಾಲುಗಳಲ್ಲಿ ಒಂದು ಶಿಕ್ಷಣದ ಕೊರತೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ. ಶಿಕ್ಷಣದ ಪ್ರವೇಶವನ್ನು ಸುಧಾರಿಸಲು ಸರ್ಕಾರವು ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದರೂ, ದೂರದ ಪ್ರದೇಶಗಳಲ್ಲಿನ ಅನೇಕ ಮಕ್ಕಳಿಗೆ ಇನ್ನೂ ಪ್ರಾಥಮಿಕ ಶಿಕ್ಷಣದ ಪ್ರವೇಶ ಕಷ್ಟಸಾಧ್ಯವಾಗಿದೆ.

3) **ಕಡಿಮೆ ಗುಣಮಟ್ಟದ ಶಿಕ್ಷಣ :-** ಶಿಕ್ಷಣದ ಗುಣಮಟ್ಟವು ಮತ್ತೊಂದು ಗಮನಾರ್ಹ ಕಾಳಜಿಯಾಗಿದೆ. ಅನೇಕ ಶಾಲೆಗಳು ಅರ್ಹ ಶಿಕ್ಷಕರನ್ನು ಹೊಂದಿಲ್ಲ, ಮತ್ತು ಪಠ್ಯಕ್ರಮವು ಹಳೆಯದಾಗಿದೆ. ಇದು ಕಲಿಕೆಯ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. ಪರಿಣಾಮವಾಗಿ, ಅನೇಕ ಮಕ್ಕಳು ಜೀವನದಲ್ಲಿ ಯಶಸ್ವಿಯಾಗಲು ಅಗತ್ಯವಾದ ಕೌಶಲ್ಯ ಮತ್ತು ಜ್ಞಾನವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿಲ್ಲ.

4) ಲಿಂಗ ಅಸಮಾನತೆ :- ಶಿಕ್ಷಣದ ಪ್ರವೇಶದಲ್ಲಿ ಲಿಂಗ ಅಸಮಾನತೆಗಳು ಭಾರತದಲ್ಲಿ ಪ್ರಚಲಿತವಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ. ಸಾಮಾಜಿಕ ನಿಯಮಗಳು ಮತ್ತು ಆರ್ಥಿಕ ಅಂಶಗಳಿಂದಾಗಿ, ಹೆಣ್ಣುಮಕ್ಕಳು ಹೆಚ್ಚಾಗಿ ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗುತ್ತಾರೆ.

5) **ಕಳಪೆ ಮೂಲಸೌಕರ್ಯ ಮತ್ತು ಸೌಲಭ್ಯಗಳು**

ಇನ್ನೊಂದು ಪ್ರಮುಖ ಸವಾಲು ಎಂದರೆ ಶಾಲೆಗಳಲ್ಲಿನ ಕಳಪೆ ಮೂಲಸೌಕರ್ಯ ಮತ್ತು ಸೌಲಭ್ಯಗಳು. ಅನೇಕ ಶಾಲೆಗಳಲ್ಲಿ ಶೌಚಾಲಯ, ಶುದ್ಧ ಕುಡಿಯುವ ನೀರು ಮತ್ತು ವಿದ್ಯುತ್‌ನಂತಹ ಮೂಲಭೂತ ಸೌಕರ್ಯಗಳಿಲ್ಲ. ಇದು ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

**6) ಗುಣಾತ್ಮಕ ಕಲಿಕೆಯಲ್ಲಿ ಪಠ್ಯ - ಸಹಪಠ್ಯ ಚಟುವಟಿಕೆಗಳ ಕೊರತೆ :-**

ಸರ್ಕಾರದ ಉಪಕ್ರಮಗಳು ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಬಹಳಷ್ಟು ಸಹಾಯ ಮಾಡಿದ್ದರೂ, ಇನ್ನೂ ಬಹಳ ದೂರ ಸಾಗಬೇಕಾಗಿದೆ. ಮತ್ತಷ್ಟು ಸುಧಾರಣೆಗಳಿಗಾಗಿ ಕೆಲವು ಸಲಹೆಗಳು ಇಲ್ಲಿವೆ.

**ಶಿಕ್ಷಣದ ಸವಾಲುಗಳನ್ನು ಸುಧಾರಿಸಲು ಸಲಹೆಗಳು**

**1.** ಪಠ್ಯಕ್ರಮ ಮತ್ತು ನಾವಿನ್ಯಯತ ಬೋಧನಾ ವಿಧಾನಗಳನ್ನು ಸುಧಾರಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬಹುದು.

**2.** ಸಮಾಜ ಮತ್ತು ಆರ್ಥಿಕತೆಯ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಲು ಪಠ್ಯಕ್ರಮವನ್ನು ನವೀಕರಿಸಬೇಕು.

**3.** ಬೋಧನಾ ವಿಧಾನಗಳನ್ನು ಬಳಸಲು ಶಿಕ್ಷಕರಿಗೆ ತರಬೇತಿ ನೀಡಬೇಕು ಮತ್ತು ಗ್ರಾಮೀಣ ಪ್ರದೇಶದ ಶಾಲೆಗಳಿಗೆ ಅರ್ಹ ಶಿಕ್ಷಕರನ್ನು ಆಕರ್ಷಿಸಲು ಪ್ರಯತ್ನಿಸಬೇಕು.

4. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಸುಧಾರಿಸಲು ಸರ್ಕಾರ ಹೆಚ್ಚು ಹೂಡಿಕೆ ಮಾಡಬೇಕು. ಶೌಚಾಲಯಗಳು, ಶುದ್ಧ ಕುಡಿಯುವ ನೀರು ಮತ್ತು ವಿದ್ಯುತ್‌ನಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಇದರಲ್ಲಿ ಸೇರಿದೆ.

**5.** ಭಾರತದಲ್ಲಿ ಇಂದು ದಿನದಿಂದ ದಿನಕ್ಕೆ ತೀವ್ರಗತಿಯಲ್ಲಿ ಬದಲಾವಣೆಯಾಗುತ್ತಿರುವ ಸಾಮಾಜಿಕ ವಾತಾವರಣದೊಂದಿಗೆ ಹೊಂದಿಕೊಳ್ಳಬೇಕಾದ ಅವಶ್ಯಕತೆ ಜೀವನದ ಅಂತ್ಯದವರೆಗೂ ಇರುತ್ತದೆ. ಹಾಗಾಗಿ ಕಲಿಕೆಯಲ್ಲಿ ಸಹಪಠ್ಯ ಚಟುವಟಿಕೆಗಳು ಪೂರಕವಾದ ವಾತಾವರಣವನ್ನು ಸೃಜಿಸುತ್ತವೆ ಶಾಲಾ ಶಿಕ್ಷಣದ ಪ್ರಸ್ತುತ ಸ್ಥಿತಿಯು ವರ್ಷಗಳಲ್ಲಿ ಗಮನಾರ್ಹವಾಗಿ ಸುಧಾರಿಸಿದೆ, ಆದರೆ ಹಲವಾರು ಸವಾಲುಗಳನ್ನು ಇನ್ನೂ ಪರಿಹರಿಸಬೇಕಾಗಿದೆ. ಶಿಕ್ಷಣದ ಸವಾಲುಗಳು ಮತ್ತು ಸುಧಾರಿಸಲು ಕಂಡುಕೊಳ್ಳಬಹುದಾದ ಮಾರ್ಗೋಪಾಯಗಳ ಬಗ್ಗೆ ತಿಳಿದೆವು.

ಶಿಕ್ಷಣದ ರಂಗಗಳ ಎಲ್ಲಾ ಸವಾಲುಗಳನ್ನು ಎದುರಿಸಲು ಇಲಾಖೆ ಮತ್ತು ಶಿಕ್ಷಕರಿಂದ ಮಾತ್ರ

**https://en.wikipedia.org/wiki/Education_in_India**

**ನ್ಯಾಸ್ ಬಗ್ಗೆ ಇನ್ನು ಹೆಚ್ಚಿನ ಮಾಹಿತಿಗಳನ್ನು ವೆಬ್ ಸೈಟ್ ನಲ್ಲಿ ಅವಲೋಕಿಸಿ.**

**ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ಉತ್ತಮ ಭವಿಷ್ಯವನ್ನು ರೂಪಿಸಬಹುದಾದ ಪಾಲುದಾರರು/ಬಾಗೀದಾರರು ಯಾರು ?**

## :- ಗುಣಾತ್ಮಕ ಶಿಕ್ಷಣದಲ್ಲಿನ ವಿವಿಧ ಭಾಗೀದಾರರು :-

ನಿರೀಕ್ಷಿತ ಕಲಿಕಾ ಫಲಗಳು:

**1. ಗುಣಾತ್ಮಕ ಶಿಕ್ಷಣದಲ್ಲಿನ ವಿವಿಧ ಭಾಗೀದಾರರು ಮತ್ತು ಅವರ ಪಾತ್ರದ ಬಗ್ಗೆ ತಿಳಿಯುವರು**


**2. ಎಲ್ಲಾ ಭಾಗೀದಾರರು ತಮ್ಮ ಹೊಣೆಗಾರಿಕೆಗಳನ್ನು ಅರ್ಥ ಮಾಡಿಕೊಂಡು ಶಿಕ್ಷಣದ ಗುಣಾತ್ಮಕತೆಗಾಗಿ ನಿರಂತರವಾಗಿ ಶ್ರಮಿಸುವರು.**

**3. ಶಾಲೆಯ ಭೌತಿಕ ಮತ್ತು ಶೈಕ್ಷಣಿಕ ಸೌಲ ಭ್ಯಗಳ ಅಭಿವೃದ್ಧಿ ಹಾಗೂ ಸಂಪನ್ಮೂಲಗಳ ಗರಿಷ್ಠ ಬಳಕೆಯಾಗುವುದು.**

**4. ಪೋಷಕರು ಮತ್ತು ಸಮುದಾಯದ ಸಹಕಾರದಿಂದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಶಿಕ್ಷಕರು ಹಾಗೂ ಮಕ್ಕಳು ಸಕ್ರಿಯವಾಗಿ ಭಾಗವಹಿಸುವರು.**

**5. ವಿವಿಧ ಭಾಗೀದಾರರನ್ನು ಶಾಲಾ ಪ್ರಕ್ರಿಯೆಗಳಿಗೆ ಹೊಂದಿಸಿ ಕೊಳ್ಳುವ ಕ್ರಮಗಳನ್ನು ತಿಳಿಯುವರು.**

ಶಿಕ್ಷಣ ವ್ಯವಸ್ಥೆಯನ್ನು ಉತ್ತಮಗೊಳಿಸುವಲ್ಲಿ ಆಸಕ್ತಿ ಹೊಂದಿರುವ ಒಬ್ಬ ವ್ಯಕ್ತಿ, ಸಮೂಹ ಅಥವಾ ಒಂದು ಸಂಘಟನೆಯನ್ನು ಭಾಗೀದಾರರು ಎನ್ನುತ್ತೇವೆ. ಈ ಭಾಗೀದಾರರು ತಮ್ಮ ಯೋಜನೆ ಮತ್ತು ಸಹಕಾರದಿಂದ ಶಿಕ್ಷಣದ ಗುರಿಯನ್ನು ಮುಟ್ಟಲು ಸಹಾಯ ಮಾಡುತ್ತಾರೆ. ಗುಣಾತ್ಮಕ ಶಿಕ್ಷಣದಲ್ಲಿ ವಿವಿಧ ಭಾಗೀದಾರರನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು,



**1.ನೇರ ಭಾಗೀದಾರರು (ಪ್ರಾಥಮಿಕ ಹಂತದ ಭಾಗೀದಾರರು)**

- ವಿದ್ಯಾರ್ಥಿಗಳು
- ಮುಖ್ಯ ಶಿಕ್ಷಕರು
- ಶಿಕ್ಷಕರು
- ಇಲಾಖೆ
- ಪೋಷಕರು
- ಎಸ್. ಡಿ.ಎಂ.ಸಿ

**2.ಪರೋಕ್ಷ ಭಾಗೀದಾರರು (ದ್ವಿತೀಯ ಹಂತದ ಭಾಗೀದಾರರು)**

- ಹಿರಿಯ ವಿದ್ಯಾರ್ಥಿಗಳು
- ಸ್ವಯಂ ಸೇವಾ ಸಂಸ್ಥೆಗಳು
- ದಾನಿಗಳು
- ಜನಪ್ರತಿನಿಧಿಗಳು
- ಸಮುದಾಯ

ಔಪಚಾರಿಕವಾಗಿ ಶಿಕ್ಷಕರು ವಿದ್ಯಾರ್ಥಿ ನಡುವೆ ಸಹಜ ಸನ್ನಿವೇಶವನ್ನು ಸೃಜಿಸಿಕೊಂಡು ಅಪೇಕ್ಷಿತ ವರ್ತನೆಗಳನ್ನು ನಿರೀಕ್ಷಿಸುವ ಪ್ರಕ್ರಿಯೆಯು ತರಗತಿ ಕೋಣೆಯಲ್ಲಿ ನಡೆಯುತ್ತದೆ. ಇದು ಯಾಂತ್ರಿಕವಾಗಿ ಸಾಗಿದ್ದಲ್ಲಿ ಕಲಿಕೆ

ಪರಿಣಾಮಕಾರಿಯಾಗಿ ಮತ್ತು ನಿರೀಕ್ಷಿತ ಮಟ್ಟದಲ್ಲಿ ಸಾಗದಿರುವುದನ್ನು ವಿವಿಧ ಸಾಧನ ಸಮೀಕ್ಷೆಗಳಲ್ಲಿ ಗಮನಿಸಿದ್ದೇವೆ. ಹಾಗಾದರೆ ಕಲಿಕಾ ಪ್ರಕ್ರಿಯೆಯು ಗುಣಾತ್ಮಕವಾಗಿ ಸಾಗಲು ವಿದ್ಯಾರ್ಥಿಯ ಆಸಕ್ತಿ ಅಭಿರುಚಿಗಳನ್ನು ಆಧರಿಸಿ ನಿರೀಕ್ಷಿತ ಗುರಿಯನ್ನು ಸಾಧಿಸಲು ಕ್ರಮ ವಹಿಸಬೇಕಿದೆ.

ಶಿಕ್ಷಣದಲ್ಲಿ ಭಾಗೀದಾರರು ವಿದ್ಯಾರ್ಥಿಗಳು ಉತ್ತಮ ಶಿಕ್ಷಣವನ್ನು ಪಡೆಯಲು, ಯುವಕರಿಗೆ ಉತ್ತಮ ಶಿಕ್ಷಣವನ್ನು ನೀಡುವ ಮೂಲಕ ಭವಿಷ್ಯದಲ್ಲಿ ಸಮುದಾಯದ ಯಶಸ್ವಿ ಸದಸ್ಯರಾಗಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಮೂಲಕ ಬಲವಾದ ಸಮುದಾಯವನ್ನು ನಿರ್ಮಿಸುವುದಾಗಿದೆ. ಶೈಕ್ಷಣಿಕ ಗುರಿಗಳನ್ನು ತಲುಪವಲ್ಲಿ ತಂಡದ ಪ್ರಯತ್ನವೂ ಯಶಸ್ಸಿನ ಸಾಧ್ಯತೆಗಳನ್ನು ಹೆಚ್ಚಿಸುವುದರಿಂದ ಭಾಗೀದಾರರು ಶಿಕ್ಷಣದಲ್ಲಿ ಪ್ರಮುಖರಾಗಿದ್ದಾರೆ. ಶೈಕ್ಷಣಿಕ ಗುರಿಗಳ ಯಶಸ್ಸಿಗೆ ಕೆಲಸ ಮಾಡುವ ತಂಡದ ಭಾಗವಾಗಿ ಎಲ್ಲಾ ಪಾಲುದಾರರು ಪ್ರಮುಖ ಪಾತ್ರಗಳನ್ನು ವಹಿಸುತ್ತಾರೆ.

ಕಲಿಕಾ ಪ್ರಕ್ರಿಯೆಯ ಮೇಲೆ ಭಾಗೀದಾರರಾದ ವಿದ್ಯಾರ್ಥಿಗಳು ಶಿಕ್ಷಕರು ಪೋಷಕರು ಆಡಳಿತಾಧಿಕಾರಿಗಳು ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ಚುನಾಯಿತ ಪ್ರತಿನಿಧಿಗಳು ಸ್ವಯಂ ಸೇವಾ ಸಂಸ್ಥೆಗಳು ಪ್ರಭಾವವನ್ನು ಬೀರುತ್ತವೆ. ಕಲಿಕಾ ಪ್ರಕ್ರಿಯೆಯ ಯಶಸ್ಸು ಭಾಗೀದಾರರ ಪಾತ್ರಗಳನ್ನು ಹೀಗೆ ಪಟ್ಟಿ ಮಾಡಬಹುದು.

- ಕಲಿಕಾ ವಾತಾವರಣ ನಿರ್ಮಿಸಲು ಪೂರಕ
- ಗುರಿ ಮತ್ತು ನಿರೀಕ್ಷೆಗಳನ್ನು ಜೋಡಿಸಲು
- ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಬೆಂಬಲಿಸುವುದು
- ಉಸ್ತುವಾರಿ ವಹಿಸುವುದು ಮತ್ತು ಫಲಿತಗಳನ್ನು ಮೌಲ್ಯೀಕರಿಸುವುದು
- ಪ್ರಗತಿಗಾಗಿ ನಿರಂತರವಾಗಿ ಶ್ರಮಿಸುವುದು

ಕಲಿಕಾ ಪ್ರಕ್ರಿಯೆಯಲ್ಲಿನ ನಿರೀಕ್ಷೆಗಳು ಬದಲಾಗುತ್ತಿರುವ ಸಮಾಜಕ್ಕೆ ಪೂರಕವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಇದೆ. ಕಲಿಕಾ ವಾತಾವರಣ ಕಲಿಕಾ ಪ್ರಕ್ರಿಯೆ ಮೇಲೆ ಪ್ರಭಾವ ಬೀರುವ ಅಂಶವಾಗಿದೆ

ಆದ್ದರಿಂದ ಮೂಲಭೂತ ಸೌಕರ್ಯಗಳನ್ನು ಶೈಕ್ಷಣಿಕ ಸೌಲಭ್ಯಗಳ ಪೂರೈಕೆಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ. ತಂತ್ರಜ್ಞಾನ ಕಲಿಕೆ ವಿವಿಧ ಆಯಾಮಗಳ ಮೂಲಕ ಕಲಿಕಾ ಪ್ರಕ್ರಿಯೆ ಅನಿವಾರ್ಯವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಉತ್ತಮ ಪಡಿಸಲು ವಿವಿಧ ಭಾಗೀದಾರರ ಯಶಸ್ವಿ ಭಾಗವಹಿಸುವಿಕೆ ಅಗತ್ಯವಿದೆ

**3.1. ಗುಣಾತ್ಮಕ ಶಿಕ್ಷಣ ಪ್ರಕ್ರಿಯೆಯಲ್ಲಿ ವಿವಿಧ ಭಾಗೀದಾರರ ಪಾತ್ರ :**

ಗುಣಾತ್ಮಕ ಶಿಕ್ಷಣದ ವಿವಿಧ ಭಾಗೀದಾರರ ಬಗ್ಗೆ ಹಿಂದಿನ ಅಧ್ಯಾಯಗಳಲ್ಲಿ ತಿಳಿದಿದ್ದೇವೆ. ಈಗ ಪ್ರತಿ ಭಾಗೀದಾರರು ಶಿಕ್ಷಣದ ಗುಣಾತ್ಮಕತೆಗೆ ಬೆಂಬಲ ನೀಡುವಲ್ಲಿ ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತಾರೆಂದು ಚರ್ಚಿಸೋಣ.

**1. ಶಿಕ್ಷಕರು :-**

ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಬಹು ಮುಖ್ಯ ಪಾತ್ರವನ್ನು ವಹಿಸುತ್ತಾರೆ .ಮಗು ಮನೆಯ ಪರಿಸರದಿಂದ ಶಾಲೆಗೆ ದಾಖಲಾದ ನಂತರ ಮಗುವಿನ ಸರ್ವಾಂಗೀಣ ಪ್ರಗತಿಯ ಹೊಣೆ ಶಿಕ್ಷಕರದ್ದಾಗಿರುತ್ತದೆ. ಮಗುವಿಗೆ ಸಂಸ್ಕಾರ, ಶಿಸ್ತು, ಮೌಲ್ಯ ಮುಂತಾದವುಗಳನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಹೆಚ್ಚು. ಈ ನಿಟ್ಟಿನಲ್ಲಿ ಶಿಕ್ಷಕರು ಕೇವಲ ಪಠ್ಯವಸ್ತುವಿಗಷ್ಟೇ ಸೀಮಿತವಾಗದೆ ಮಗುವಿನ ಸರ್ವತೋಮುಖ ಪ್ರಗತಿಗೆ ಆದ್ಯತೆ ನೀಡಬೇಕಾಗುತ್ತದೆ. ಚಿಕ್ಕ ಮಕ್ಕಳು ಶಿಕ್ಷಕರು ಹೇಳಿದ್ದಕ್ಕಿಂತ ಶಿಕ್ಷಕರ ನಡೆ-ನುಡಿಗಳನ್ನು ಅನುಕರಣೆ ಮಾಡುವುದರಿಂದ ಶಿಕ್ಷಕರು ಮೌಲ್ಯಯುತ ಜೀವನ ಶೈಲಿಯನ್ನು ತಮ್ಮದಾಗಿಸಿಕೊಳ್ಳುವುದರ ಮೂಲಕ ಮಕ್ಕಳಿಗೆ ಉತ್ತಮ ಮಾದರಿಯಾಗಬೇಕಾಗುತ್ತದೆ. ಮಕ್ಕಳು, ಮಕ್ಕಳ ಪೋಷಕರು ಸಮುದಾಯದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರಬೇಕಾದ ಅಗತ್ಯವಿದೆ. ಸಮುದಾಯದ ಮತ್ತು ಪೋಷಕರ ಬೆಂಬಲದೊಂದಿಗೆ ಶಾಲೆಗೆ ಅಗತ್ಯವಿರುವ ಸೌಕರ್ಯಗಳನ್ನು ಪಡೆಯುವಲ್ಲಿ ಶಿಕ್ಷಕರು ಭಾಗೀದಾರರೊಂದಿಗೆ ಉತ್ತಮ ಒಡನಾಟವನ್ನು ಹೊಂದಿರುವ ಅವಶ್ಯಕತೆ ಇದೆ. ಪರೀಕ್ಷೆಗಳಲ್ಲಿ ಅಂಕಗಳಿಕೆಯೇ ವಿದ್ಯಾರ್ಥಿಗಳನ್ನು ಅಳೆಯುವ ಮಾನದಂಡವಾಗಬಾರದು. ಸಮಾಜಕ್ಕೆ ಉತ್ತಮ ನಾಗರಿಕರನ್ನು ಅಣಿಗೊಳಿಸುವ ಕಾರ್ಯ ಶಿಕ್ಷಕರದ್ದಾಗಬೇಕು.

**ಶಾಲೆಯ ಉತ್ತಮ ಶಿಕ್ಷಕರಾಗಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ನೀವು ರೂಪಿಸುವ**

ಶಿಕ್ಷಕ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳು ಆಸಕ್ತಿಯಿಂದ ಭಾಗವಹಿಸಿ ಕಲಿಯುವಂತೆ ಹೇಗೆ ಅನುಕೂಲಿಸಬಹುದು ಪಟಿ ಮಾಡಿ.

**ಕಲಿಕಾ ಸ್ನೇಹಿ ತರಗತಿಗಳನ್ನು ರೂಪಿಸುವಲ್ಲಿ ಭಾಗೀದಾರರಾದ ಶಿಕ್ಷಕರ ಪಾತ್ರ**

ಪ್ರತಿ ಶಿಕ್ಷಕನು ಬದಲಾಗುತ್ತಿರುವ ಕಾಲಮಾನಕ್ಕೆ ಅನುಗುಣವಾಗಿ ತನ್ನ ವೃತ್ತಿಪರತೆಯ ಗುಣಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ಮುಂದುವರೆದ ಶಿಕ್ಷಣ ಹೊಸ ತರಬೇತಿ ತಂತ್ರಗಳು ಹಾಗೂ ನವ ಆಲೋಚನೆಗಳಿಗೆ ಅವಕಾಶ ಮಾಡಿಕೊಡಬಲ್ಲ ಸರಳ ಸಂಶೋಧನೆಗಳತ್ತ ಯಾವಾಗಲೂ ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ. ರವೀಂದ್ರನಾಥ ಟಾಗೂರ್ ರವರು ಹೇಳಿದಂತೆ “ಸದಾ ಪ್ರಜ್ವಲವಾಗಿ ಉರಿಯುವ ದೀಪ ಮಾತ್ರವೇ ಇನ್ನೊಂದು ದೀಪಕ್ಕೆ ಬೆಳಕು ಕೊಡಬಲ್ಲದು”.

**ಬೋಧನಾ ವಿಧಾನಗಳು :**

ವಿವಿಧ ಬೋಧನಾ ಕೌಶಲಗಳಲ್ಲಿ ಪ್ರಾವೀಣ್ಯತೆ ಹೊಂದಿ ನಾವಿನ್ಯಯುತ ಬೋಧನಾ ಕಲಿಕಾ ಪ್ರಕ್ರಿಯೆಗಳ ಮೂಲಕ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ಆಸಕ್ತಿಯಿಂದ ಭಾಗವಹಿಸಿ ಪರಿಣಾಮಕಾರಿಯಾಗಿ ಕಲಿಯುವಂತೆ ಮಾಡಲು ಸಾಕಷ್ಟು ವಿಧಾನಗಳಿವೆ.

**1. ಯೋಜನಾ ವಿಧಾನ:**

ತರಗತಿಯ ಕಲಿಕೆಯನ್ನು ದೃಢೀಕರಣಗೊಳಿಸುವುದಕ್ಕಾಗಿ ಅಥವಾ ತರಗತಿ ಕಲಿಕೆಯ ಕೆಲವು ಅಂಶಗಳನ್ನ ತಿಳಿದುಕೊಳ್ಳಲು ಯೋಜನಾ ವಿಧಾನವನ್ನು ಬಳಸಬಹುದು. ವಿವಿಧ ವಿಷಯಗಳ ಕಲಿಕೆಗೆ ಮತ್ತು ಕಲಿಕೆಯ ದೃಢೀಕರಣಕ್ಕೆ ಯೋಜನಾ ವಿಧಾನದ ಅಡಿಯಲ್ಲಿ ಕ್ಷೇತ್ರ ಅಧ್ಯಯನ, ಕ್ಷೇತ್ರಭೇಟಿ ಕೈಗೊಳ್ಳುವಿಕೆಯನ್ನು ಕಲಿಕಾ ಪ್ರಕ್ರಿಯೆಯಾಗಿ ಬಳಸಿಕೊಳ್ಳಬಹುದು.

**2. ಅನ್ವೇಷಣಾ ವಿಧಾನ :**

ಸಹಜ ಕ್ರಿಯೆಗಳ ಹಿಂದಿನ ನಿಯಮ ಅಥವಾ ತತ್ವಗಳನ್ನು ಮಕ್ಕಳೇ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಪರಿಶೋಧಿಸಲು ಅವಕಾಶ ಕಲ್ಪಿಸಬಹುದು. ಉದಾಹರಣೆಗೆ ಬೆಳಕಿನ ನಿಯಮಗಳು, ಚಲನೆಯ ನಿಯಮಗಳು, ಸ್ಥಳೀಯ ಮಾನವ ಸಂಪನ್ಮೂಲಗಳ ಅನ್ವೇಷಣೆ ಮತ್ತು ಬಳಕೆ, ಸಾಮಾಜಿಕ ಜೀವನ, ಭೌಗೋಳಿಕ ಅಂಶಗಳ ಪರಿಚಯ, ವಿವಿಧ ಕಸುಬು, ಉದ್ಯಮ, ಕೃಷಿಕರ ಭೇಟಿ, ಸಂದರ್ಶನ, ವಿಷಯ ಸಂಗ್ರಹಣೆ ಇತ್ಯಾದಿ.

**3. ಪ್ರದರ್ಶನ ವಿಧಾನ :**

ಶಿಕ್ಷಕರ ಸಹಕಾರದಿಂದ ಮತ್ತು ಸೃಜನಶೀಲತೆಯಿಂದ ವಸ್ತು ಪ್ರದರ್ಶನದ ಮೂಲಕ ಮಕ್ಕಳು ಕಲಿಕಾ ಪ್ರದರ್ಶನ ಮಾಡಬಹುದು. ಉದಾ:- ಲಲಿತ ಕಲೆಗಳ ಸಮನ್ವಯ, ಏಕಪಾತ್ರ ಅಭಿನಯ, ನಾಟಕ, ಚಿತ್ರಕಲೆ, ಕಲಾ ಸಮ್ಮಿಳಿತ, ಕ್ರೀಡಾ ಸಮ್ಮಿಳಿತ ಕಲಿಕೆ.

### 4. ಐಸಿಟಿ ಆಧಾರಿತ ಕಲಿಕೆ

ತಾಂತ್ರಿಕವಾಗಿ ಮುನ್ನಡೆಯುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಸಾಂಪ್ರದಾಯಿಕ ಕಲಿಕಾ ಪ್ರಕ್ರಿಯೆಯಿಂದ ಆಧುನಿಕ ಕಲಿಕಾ ಪ್ರಕ್ರಿಯೆಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆ. ಐಸಿಟಿ ಬಳಕೆಯೊಂದಿಗೆ ಶಿಕ್ಷಕರು ಬೋಧನಾ ಪ್ರಕ್ರಿಯೆ ಅಳವಡಿಸಿಕೊಂಡಲ್ಲಿ ತರಗತಿಯಲ್ಲಿ ಕಲಿಕಾ ಪ್ರಕ್ರಿಯೆ ಆಕರ್ಷಕವಾಗಿ ಮೂಡಿ ಬರಲು ಪೂರಕವಾಗುವುದು. ಆಗ ವಿದ್ಯಾರ್ಥಿಯ ಗಮನ ಸೆಳೆಯಲು ಪೂರಕವಾಗುತ್ತದೆ.

ನೀವು ಈಗಾಗಲೇ ಐಸಿಟಿ ಆಧಾರಿತ ಕಲಿಕೆಯನ್ನು ನಿರ್ವಹಿಸುತ್ತಿರುವಿರಿ ಈ ಬಗ್ಗೆ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ **ಮತ್ತು** ಶೈಕ್ಷಣಿಕ App ಗಳ ಉಪಯುಕ್ತಗಳನ್ನು ತಿಳಿಸಿ

ನಿಷ್ಠ **ಆನ್ಲೈನ್** ತರಬೇತಿಯನ್ನು ವಿವಿಧ ಹಂತಗಳಲ್ಲಿ ಪಡೆದಿರುವಿರಿ ಇದರ ಫಲಿ**ತಾಂಶ**ಗಳನ್ನು ತರಗತಿ ಪ್ರಕ್ರಿಯೆಯನ್ನು ಉತ್ತಮಗೊಳಿಸಲು ಹೇಗೆ ಅಳವಡಿಸಿಕೊಳ್ಳುತ್ತಿರುವಿರಿ?

### 1. ವಿದ್ಯಾರ್ಥಿಗಳು :

ಶಾಲೆಯ ಯಶಸ್ಸು ವಿದ್ಯಾರ್ಥಿಗಳ ಸಾಧನೆ ಮೇಲೆ ನಿಂತಿದೆ. ಶಾಲೆಗೆ ಬರುವ ವಿದ್ಯಾರ್ಥಿಗಳು ಕೇವಲ ಪರೀಕ್ಷೆಯಲ್ಲಿ ಪಡೆಯುವ ಉತ್ತಮ ಫಲಿತಾಂಶ, ಶ್ರೇಣಿಯಿಂದ ಅಷ್ಟೇ ಅಲ್ಲದೆ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಾದ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ರೀತಿಯ ಸ್ಪರ್ಧೆಗಳಲ್ಲಿ ಮಾಡಿರುವ ಸಾಧನೆಯು ಶಾಲೆಯ ಶೈಕ್ಷಣಿಕ ಗುಣಮಟ್ಟವನ್ನು ಬಿಂಬಿಸುತ್ತದೆ. ವಿದ್ಯಾರ್ಥಿಗಳು ಶಾಲೆಗೆ ನಿರಂತರವಾಗಿ ಹಾಜರಾಗುವುದು, ಶಾಲೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ಶಿಕ್ಷಕರು ಬೋಧಿಸಿದ ಪಾಠಗಳನ್ನು ಅಭ್ಯಾಸ ಮಾಡುವುದು, ಸಂಶಯಗಳಿದ್ದಲ್ಲಿ ಪರಿಹರಿಸಿಕೊಳ್ಳುವುದು. ಪೋಷಕರ ಆಸೆ ಆಕಾಂಕ್ಷೆಗಳನ್ನು ಈಡೇರಿಸುವ ಹೊಣೆ ವಿದ್ಯಾರ್ಥಿಗಳ ಮೇಲಿದ್ದು ಪೋಷಕರ ಆಸೆಗಳಿಗೆ ತಣ್ಣೀರೆರಚುವ ಕಾರ್ಯ ಚಟುವಟಿಕೆಗಳ ಕಡೆಗೆ ಮನಸ್ಸನ್ನು ವಾಲಿಸದೆ ಉತ್ತಮ ಶಿಕ್ಷಣವನ್ನು ಪಡೆದು ಪ್ರಜ್ಞಾವಂತ ನಾಗರೀಕರಾಗುವ ಗುರಿಯತ್ತ ಮುನ್ನಡೆಯುವುದು ವಿದ್ಯಾರ್ಥಿಗಳ ಆದ್ಯ ಕರ್ತವ್ಯ..

ಗುಣಾತ್ಮಕ ಶಿಕ್ಷಣದ ಯಶಸ್ವಿ ಭಾಗೀದಾರರಾಗಲು ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗಿ ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಎಲ್ಲಾ ಮಕ್ಕಳಲ್ಲಿ ಇದನ್ನು ನಿರಂತರವಾಗಿ ನಿರೀಕ್ಷಿಸಲು ಸಾಧ್ಯವೇ? ಇಲ್ಲವಾದಲ್ಲಿ ನಮ್ಮಗಳ ಪಾತ್ರವೇನು ? ಆಲೋಚಿಸೋಣ

ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಶಿಕ್ಷಣದ ಅನುಷ್ಠಾನಕ್ಕೆ ಅಗತ್ಯವಾದ ನೀತಿ ನಿಯಮಗಳು, ಗೊಂದಲ ಪರಿಹಾರಕ್ಕೆ ಸೂಕ್ತ ನಿರ್ದೇಶನಗಳು ಇಲಾಖಾ ಸೂಚನೆಗಳು ,ಸಂಪನ್ಮೂಲ ಸೌಲಭ್ಯಗಳ ಸಮಾನ ಹಂಚಿಕೆ, ಶಿಕ್ಷಕರ ತರಬೇತಿ, ಪಠ್ಯಕ್ರಮ ಅಭಿವೃದ್ಧಿ, ಶಾಲೆಗೆ ಅಗತ್ಯ ಬೌದ್ಧಿಕ ಸೌಲಭ್ಯಗಳು, ಪರಿಣಾಮಕಾರಿ ಕಲಿಕಾ ವಾತಾವರಣ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವೆಲ್ಲವುಗಳನ್ನು ಸೂಕ್ತ ಸಮಯದಲ್ಲಿ ಒದಗಿಸುವಲ್ಲಿ ಇಲಾಖಾ ಅಧಿಕಾರಿಗಳು ಗಮನ ಹರಿಸುವುದು. ಪಠ್ಯಪುಸ್ತಕಗಳನ್ನು ಒಳಗೊಂಡಂತೆ ಎಲ್ಲಾ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ನಿಗದಿತ ಸಮಯಕ್ಕೆ ಸಿಗುವಂತಾಗಬೇಕು.

**ಭೇಟಿಯ ಸಂದರ್ಭದಲ್ಲಿ ತರಗತಿ ಪ್ರಕ್ರಿಯೆಯಲ್ಲಿ ವೀಕ್ಷಣೆಯನ್ನು ಯಾವೆಲ್ಲ ಅಂಶಗಳನ್ನು ಆಧರಿಸಿ ಮಾಡಬೇಕಿದೆ**

ಶೈಕ್ಷಣಿಕ ಭೇಟಿಗಳಲ್ಲಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸೂಕ್ತ ಬೆಂಬಲ ಮತ್ತು ಮಾರ್ಗದರ್ಶನ ನೀಡುವುದು. ವಿವಿಧ ಹಂತದ ಮೇಲುಸ್ತುವಾರಿ ಅಧಿಕಾರಿಗಳಿಗೆ ಭೇಟಿಗಳನ್ನು ಸಂಪನ್ನಗೊಳಿಸಲು ಸೂಕ್ತ ಮಾರ್ಗದರ್ಶನ ನೀಡುವುದು.

### 5. ಪೋಷಕರು :

ನಮ್ಮೂರ ಶಾಲೆಯ ಗುಣಮಟ್ಟ ನಮ್ಮೂರ ಶಾಲೆಯ ಪೋಷಕರನ್ನು ಅವಲಂಭಿಸಿದೆ. ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸುವ ಪೋಷಕರು ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆಯೇ? ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶಾಲೆಯಲ್ಲಿರುವ ತೊಡಕುಗಳೇನು? ತೊಡಕುಗಳ ನಿವಾರಣೆ ನನ್ನಿಂದ ಸಾಧ್ಯವೇ ? ಶಾಲೆಗೆ ನನ್ನ ಮಗುವನ್ನು ದಾಖಲಿಸಿದರೆ ಆಯಿತೇ? ನನ್ನ ಕರ್ತವ್ಯ ಅಲ್ಲಿಗೆ ಮುಗಿಯಿತೆ? ಉಳಿದಿದ್ದೆಲ್ಲವೂ ಶಿಕ್ಷಕರ ಕರ್ತವ್ಯವೇ ? ಎಂಬುದನ್ನು ಆಲೋಚಿಸೋಣ?.

ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಇರುವ ತೊಡಕುಗಳ ಬಗ್ಗೆ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರಿಂದ ಮಾಹಿತಿಯನ್ನು ಸಂಗ್ರಹಿಸಿ ಅಗತ್ಯ ಸಹಾಯ ಹಸ್ತ ನೀಡುವಲ್ಲಿ ಪೋಷಕರ ಪಾತ್ರ ಅತ್ಯವಶ್ಯಕ. ಪೋಷಕರು ಶಾಲೆಯಲ್ಲಿ ನಡೆಯುವ ಪೋಷಕರ ಸಭೆಗಳಿಗೆ ಸಮುದಾಯದತ್ತ ಸಭೆಗಳಿಗೆ ಹಾಜರಾಗುವುದಷ್ಟೇ ಅಲ್ಲದೆ ತಮ್ಮ ಮಕ್ಕಳ ಕಲಿಕಾ ಪ್ರಗತಿಯ ಬಗ್ಗೆ ತಿಳಿಯಲು ಶಾಲೆಗೆ ಆಗಾಗ್ಗೆ ಭೇಟಿ ನೀಡುವುದರ ಮೂಲಕ ಶಾಲೆ ಮತ್ತು ಶಾಲೆಯ ಶಿಕ್ಷಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಶಾಲೆಗೆ ಮಕ್ಕಳನ್ನು ನಿರಂತರವಾಗಿ ಕಳುಹಿಸುವ ಹೊಣೆ ಪೋಷಕರದ್ದಾಗಿದೆ.

ಮನೆ ಮತ್ತು ವ್ಯವಸಾಯದ ಕೆಲಸಗಳಿಗಾಗಿ ಮಕ್ಕಳನ್ನು ಶಾಲೆಗೆ ಕಳುಹಿಸದಂತೆ ಸದಾ ಬಳಸಿಕೊಳ್ಳುವುದು ಒಳಿತಲ್ಲ. ಗುಣಮಟ್ಟದ ಶಿಕ್ಷಣ ನೀಡುವುದು ಇಲಾಖೆಯ ಹೊಣೆ ಅಷ್ಟೇ ಅಲ್ಲ, ಅದರಲ್ಲಿ ಪೋಷಕರ ಪಾತ್ರ ಬಹು ಮುಖ್ಯ. ಅಗತ್ಯವಿದ್ದಲ್ಲಿ ಇತರೆ ಪೋಷಕರಿಗೆ ತಿಳುವಳಿಕೆಯನ್ನು ನೀಡಿ ಊರಿನ ಪ್ರತಿ ಮಗು ಉತ್ತಮ ಶಿಕ್ಷಣ ಪಡೆದು ಪ್ರಜ್ಞಾವಂತ ನಾಗರಿಕನಾಗುವಂತೆ ಮಾಡುವಲ್ಲಿ ಪೋಷಕರ

ಸಹಕಾರ ಅತ್ಯಗತ್ಯ. ಮನೆಯಲ್ಲಿ ಉತ್ತಮವಾದ ಕಲಿಕಾ ವಾತಾವರಣವನ್ನು ನಿರ್ಮಿಸುವುದು, ವಿದ್ಯಾವಂತ ಪೋಷಕರು ಮಗುವಿನ ಕಲಿಕೆಯನ್ನು ಅನುಕೂಲಿಸುವುದು, ಸ್ಥಿತಿವಂತ ಪೋಷಕರು ಶಾಲೆಗೆ ತಮ್ಮಿಂದಾಗುವ ಭೌತಿಕ ಸೌಲಭ್ಯಗಳನ್ನು ಒದಗಿಸಬಹುದಾಗಿದೆ.





**ಪೋಷಕನಾಗಿ ನನ್ನ ಮಗುವಿನ ಗುಣಮಟ್ಟದ ಶಿಕ್ಷಣಕ್ಕೆ ನಾನೇನು ಮಾಡಬಲ್ಲೆ ? ಪಟ್ಟಿಮಾಡಿ.**

## 2. ಎಸ್. ಡಿ. ಎಂ. ಸಿ

ಶಾಲೆಯ ಪ್ರಗತಿಯು ಆ ಶಾಲೆಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಗೆ ಶಾಲೆಯ ಬಗ್ಗೆ ಇರುವ ಒಲವನ್ನು ತೋರಿಸುತ್ತದೆ. ಪೋಷಕರನ್ನು ಒಳಗೊಂಡ ಶಾಲಾ ಅಭಿವೃದ್ಧಿ ಸಮಿತಿಯ ಪಾತ್ರ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೆ ಅವಶ್ಯಕ. ತಮ್ಮ ಮಕ್ಕಳು ಅಭ್ಯಾಸ ಮಾಡುವ ಶಾಲೆಯ ಒಳಿತು-ಕೆಡಕು, ಕೊರತೆ, ಒದಗಿಸಬೇಕಾದ ಸೌಲಭ್ಯಗಳ ಅರಿವು, ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರುಗಳಿಗಿರುತ್ತದೆ.

ಶಾಲೆಯಲ್ಲಿ ನಡೆಯುವ ಎಲ್ಲ ಸಭೆಗಳಿಗೆ ತಪ್ಪದೇ ಹಾಜರಾಗಬೇಕು. ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿರುವ ತೊಂದರೆಗಳೇನು? ಅವುಗಳಿಗೆ ನಾವು ನೀಡಬಹುದಾದ ಪರಿಹಾರಗಳ ಬಗ್ಗೆ ಚರ್ಚಿಸಬೇಕು. ಪರಿಹಾರಗಳ ಬಗ್ಗೆ ಆಲೋಚಿಸಬೇಕು, ಅಗತ್ಯವಿದ್ದಲ್ಲಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರವನ್ನು ಒದಗಿಸುವ ಕಾರ್ಯವನ್ನು ಮಾಡಬೇಕಾಗಿದೆ. ಶಾಲೆಗೆ ಇಲಾಖೆಯಿಂದ ನೀಡುತ್ತಿರುವ ಅನುದಾನ ಸದ್ಬಳಕೆ ಆಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಕಲಿಕಾ ಸಾಮಗ್ರಿಗಳನ್ನು ಕೊಳ್ಳಲು ಆರ್ಥಿಕವಾಗಿ ತೊಂದರೆ ಹೊಂದಿರುವ ವಿದ್ಯಾರ್ಥಿಗಳಿಗೆ ಅಗತ್ಯ ಬೆಂಬಲ ನೀಡಬೇಕು. OOSC ತಡೆಗೆ ಅಗತ್ಯ ಕ್ರಮವಹಿಸುವ ಪ್ರಯತ್ನವಾಗಬೇಕು. ಶಾಲೆಯ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರನ್ನು

ಭೇಟಿಯಾಗಿ ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ದೊರೆಯುವಂತೆ ಮಾಡುವ ಗುರುತರ ಜವಾಬ್ದಾರಿ ಎಸ್.ಡಿ.ಎಂ.ಸಿ ಮೇಲಿದೆ. ಶಾಲೆಯ ಆಸ್ತಿಪಾಸ್ತಿಗಳನ್ನು ರಕ್ಷಿಸುವ ಹೊಣೆ ಎಸ್.ಡಿ. ಎಂ.ಸಿ ಅವರದಾಗಿರುತ್ತದೆ.

**ಎಸ್ ಡಿ ಎಂ ಸಿ ಸಹಕಾರದಿಂದ ಯಶಸ್ಸಿನ ಕಡೆಗೆ ಒಂದು ಹೆಜ್ಜೆ :**

ಇಲ್ಲೊಂದು ಶಾಲೆ ಜಿಲ್ಲಾ ಕೇಂದ್ರದಲ್ಲಿದ್ದರೂ ಉತ್ತಮ ಸೌಲಭ್ಯಗಳಿಲ್ಲದೆ ವಂಚಿತವಾಗಿತ್ತು. ಶತಮಾನ ಕಂಡ ಶಾಲೆಯಾದರೂ ಪದವಿ ಪೂರ್ವ ಕಾಲೇಜಿನೊಂದಿಗೆ ಕೊಠಡಿ ಮತ್ತು ಇತರೆ ಸೌಲಭ್ಯಗಳನ್ನು ಹಂಚಿಕೊಳ್ಳಬೇಕಾದ ಪರಿಸ್ಥಿತಿ . ಪಿಯು ಮತ್ತು ಪದವಿ ಕಾಲೇಜುಗಳು ಪಾಳಿ ಪದ್ಧತಿಯಲ್ಲಿ ಇದೇ ಆವರಣದಲ್ಲಿ ನಡೆಯುತ್ತಿದ್ದರಿಂದ ಪ್ರೌಢಶಾಲೆ ನಡೆಸಲು ಕಷ್ಟವಾಗುತ್ತಿತ್ತು. ಶಾಲೆಗೆ ವರದಾನ ಎಂಬಂತೆ ಆರ್ ಎಂ ಎಸ್ ಎ ವತಿಯಿಂದ 11 ಕೊಠಡಿಗಳು ಮಂಜೂರಾದರೂ ತಾಂತ್ರಿಕ ತೊಂದರೆಯಿಂದ ಕಾಮಗಾರಿ ಬಹಳ ತಡವಾಯಿತು. 'ತಾಳಿದವನು ಬಾಳಿಯಾನು' ಎಂಬಂತೆ ನಿಧಾನವಾದರೂ ಒಮ್ಮೆಲೇ ವಿಜ್ಞಾನ ಪ್ರಯೋಗಾಲಯ ಸೇರಿದಂತೆ 11 ಕೊಠಡಿಗಳು ಸಿದ್ಧಗೊಂಡವು. ಈ ಮಧ್ಯೆ ಶಾಲೆಗೆ ರೋಟರಿ ಸಂಸ್ಥೆ. ಬೆಂಗಳೂರು ವಲಯ ಇವರಿಂದ ನಾಲ್ಕು ಲ್ಯಾಪ್ ಟಾಪ್‌ಗಳನ್ನು ಪಡೆಯಲಾಯಿತು. ಬೋಧನೆಯಲ್ಲಿ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಸಾಧ್ಯವಾಯಿತು. ನಂತರ ಸ್ಮಾರ್ಟ್ ಸಿಟಿ ವತಿಯಿಂದ 6 ಕೊಠಡಿಗಳನ್ನು ನಿರ್ಮಿಸಲಾಯಿತು. ಸ್ಥಳೀಯ ಬ್ಯಾಂಕುಗಳ ಅಧಿಕಾರಿಗಳನ್ನು ಭೇಟಿಯಾಗಿ ಮನವಿ ಮಾಡಿದ್ದರ ಫಲವಾಗಿ ಬ್ಯಾಂಕ್ ಗಳ C S R ನಿಧಿಯಿಂದ ಬಾಲಕ-ಬಾಲಕಿಯರಿಗೆ ಪ್ರತ್ಯೇಕವಾದ ಸುಸಜ್ಜಿತ ಶೌಚಾಲಯಗಳು ನಿರ್ಮಾಣವಾದವು ಮತ್ತು 40 ಸ್ಟೀಲ್ ಡೆಸ್ಕ್ ಗಳನ್ನು ಶಾಲೆಗೆ ಪಡೆಯಲಾಯಿತು. ಉತ್ತಮ ಅಡುಗೆ ಕೋಣೆ, ಶುದ್ಧ ಕುಡಿಯುವ ನೀರು, ಯು ಜಿ ಡಿ ವ್ಯವಸ್ಥೆ, ಹೀಗೆ ಶಾಲೆಗೆ

ಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯುವಲ್ಲಿ ಅಂದಿನ ಉಪ ಪ್ರಾಂಶುಪಾಲರು ಮತ್ತು ಅವರ ತಂಡ ಯಶಸ್ವಿಯಾಯಿತು. 'ಗಾಂಧಿ ಭವನ'- ಸ್ಮಾರಕದ ಅಭಿವೃದ್ಧಿ ಮೌಲ್ಯಶಿಕ್ಷಣದತ್ತ ಗಮನ ಸೆಳೆಯಲು ಸಾಧ್ಯವಾಯಿತು. ಇವುಗಳಿಂದಾಗಿ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವಾಯಿತು ಎಂದು ಉಪಪ್ರಾಂಶುಪಾಲರು ಹೆಮ್ಮೆಯಿಂದ ಹೇಳುತ್ತಾ ತನ್ನೊಂದಿಗೆ ತಂಡವಾಗಿ ಕರ್ತವ್ಯ ನಿರ್ವಹಿಸಿದ ಬೋಧಕ- ಬೋಧಕೇತರ ಸಿಬ್ಬಂದಿ, ಪೋಷಕರು, ಎಸ್ ಡಿ ಎಂ ಸಿ ಅವರಿಗೆ ಮತ್ತು ಮಾರ್ಗದರ್ಶನ ಮಾಡಿದ ಇಲಾಖಾ ಅಧಿಕಾರಿಗಳಿಗೆ ಹಾಗೂ ಪ್ರೀತಿಯ ವಿದ್ಯಾರ್ಥಿಗಳಿಗೆ ಧನ್ಯವಾದಗಳನ್ನು ತಿಳಿಸಲು ಮರೆಯಲಿಲ್ಲ.

**ಹಾಗಾದರೆ, "ನಮ್ಮ ಸೇವಾವಧಿಯಲ್ಲಿನ ಒಂದು ಯಶೋಗಾಥೆಯನ್ನು ಹಂಚಿಕೊಳ್ಳೋಣವೇ"**

**ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣ ಅನುಷ್ಠಾನ ಮಾಡುವಲ್ಲಿ ದ್ವಿತೀಯ ಹಂತದ ಭಾಗೀದಾರರನ್ನು ತೊಡಗಿಸಿಕೊಳ್ಳುವುದು ಹೇಗೆ ? ಯಾವ ಯಾವ ಕ್ಷೇತ್ರಗಳಲ್ಲಿ ? ಪರಿಶೋಧಿಸಿ**

**ಹಿರಿಯ ವಿದ್ಯಾರ್ಥಿಗಳು :-**

ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹಿರಿಯ ವಿದ್ಯಾರ್ಥಿಗಳು ಸಾಕಷ್ಟು ಕೊಡುಗೆಗಳನ್ನು ನೀಡಬಹುದಾಗಿದೆ. ತಾನು ಕಲಿತ ಶಾಲೆಗೆ ಸಹಾಯ ಮಾಡುವುದರ ಮೂಲಕ ಶಾಲೆಯ ಕೊರತೆಗಳನ್ನು ನೀಗಿಸಬಹುದಾಗಿದೆ. ಹಿರಿಯ ವಿದ್ಯಾರ್ಥಿಗಳು ತಂಡವನ್ನು ರಚಿಸಿಕೊಂಡು ತಮ್ಮಿಂದಾಗಬಹುದಾದ ಸಹಾಯವನ್ನು ನೀಡಬಹುದು. ಶಾಲೆಯಲ್ಲಿ ಶಿಕ್ಷಣ ಪಡೆದು ಉನ್ನತ ಹುದ್ದೆಯಲ್ಲಿರುವ ಅಥವಾ ಆರ್ಥಿಕವಾಗಿ ಸಬಲರಾಗಿರುವ ಹಿರಿಯ ವಿದ್ಯಾರ್ಥಿಗಳು ಶಾಲೆಗೆ ಅಗತ್ಯವಿರುವ ಭೌತಿಕ ಸಂಪನ್ಮೂಲಗಳನ್ನು ಒದಗಿಸುವ ಮನೋಭಾವನೆಯನ್ನು ಬೆಳೆಸಿಕೊಂಡಿರುವುದು ಶ್ಲಾಘನೀಯ. ಶಿಕ್ಷಕರ ಕೊರತೆ, ಕ್ರೀಡಾ ತರಬೇತಿ, ಶಾಲಾ ಆವರಣ ಸ್ವಚ್ಛತೆ, ಪರಿಸರ ದಿನಾಚರಣೆಯಂತಹ ಸಮಯದಲ್ಲಿ ಹಿರಿಯ ವಿದ್ಯಾರ್ಥಿಗಳ ಸಹಕಾರ ಶಾಲೆಗಳಿಗೆ ಬಹುಮುಖ್ಯ. ನಿರಂತರ ಗೈರು ಹಾಜರಾಗುವ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಅಗತ್ಯ ಸಹಕಾರ ನೀಡಿ ಗುಣಮಟ್ಟದ ಶಿಕ್ಷಣ ಪಡೆಯುವಂತೆ ಮಕ್ಕಳನ್ನು ಪ್ರೇರೇಪಿಸಬಹುದಾಗಿದೆ. ಊರಿನ ಹಿರಿಯ ವಿದ್ಯಾರ್ಥಿಗಳೆಲ್ಲಾ ಸೇರಿ ಪದವೀಧರ ಶಿಕ್ಷಕರನ್ನು ನೇಮಿಸಿಕೊಂಡು ತಮ್ಮೂರಿನ ಶಾಲಾ ಮಕ್ಕಳಿಗೆ ಸ್ಪೋಕನ್ ಇಂಗ್ಲೀಷ್ ಕಲಿಸುತ್ತಿರುವುದು, ಮಕ್ಕಳಿಗೆ ಯೂನಿಫಾರಂ ಕೊಡಿಸುವುದು, ಶಾಲೆಗೆ ಕಲಿಕಾ ಸಾಮಗ್ರಿಗಳನ್ನು ಒದಗಿಸಿಕೊಡುವುದು, ಟಿವಿ, ಕಂಪ್ಯೂಟರ್ ಇತ್ಯಾದಿಗಳನ್ನು ಕೊಡುಗೆಯಾಗಿ ನೀಡಿರುವುದು. ವಿವಿಧ ವಿಷಯಗಳಲ್ಲಿ ಪರಿಣಿತಿ ಪಡೆದ ವಿದ್ಯಾರ್ಥಿಗಳಿಂದ  ವೃತ್ತಿ ಮಾರ್ಗದರ್ಶನ,

**ಶಿಕ್ಷಣ ಪಡೆದು ಸುಶಿಕ್ಷಿತರಾಗಿ ಇಂದು ಉದ್ಯೋಗದಲ್ಲಿರುವ / ಆರ್ಥಿಕವಾಗಿ ಸಬಲರಾಗುವ ನಾವುಗಳು ನಾವು ಕಲಿತ ಶಾಲೆಗೆ / ಅಲ್ಲಿಯ ಮಕ್ಕಳ ಕಲಿಕೆಗೆ ನೀಡಿರುವ ಬೆಂಬಲ ಅಥವಾ ಕೊಡುಗೆ ಏನು ಪಟ್ಟಿ ಮಾಡಿ.**

ಉನ್ನತ ಹುದ್ದೆಯಲ್ಲಿರುವ ಹಿರಿಯ ವಿದ್ಯಾರ್ಥಿಗಳಿಂದ ಪ್ರೇರಣಾತ್ಮಕ ನುಡಿಗಳನ್ನು ಹೇಳಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಪ್ರೇರಣೆಯನ್ನು ನೀಡಬಹುದು.

**ಸಮುದಾಯ :**

ಒಂದು ಗುಂಪಿನಲ್ಲಿ ಜನರು ವಾಸ ಮಾಡುತ್ತಾ ಕೆಲವು ಸಾಮಾನ್ಯ ನೀತಿ ನಿಯಮ, ಮೌಲ್ಯಗಳು ಮತ್ತು ಗುರುತುಗಳನ್ನು ಹೊಂದಿ, ಒಂದು ನಿಗದಿತ ಭೌಗೋಳಿಕ ಪ್ರದೇಶದಲ್ಲಿ ಬದುಕುವುದನ್ನು 'ಸಮುದಾಯ'ವೆಂದು ಕರೆಯುತ್ತಾರೆ. ಹೀಗಾಗಿ ಸಮುದಾಯವನ್ನು ಒಂದು' ಸಾಮಾಜಿಕ ಘಟಕ 'ಎಂದು ಕರೆಯಲಾಗುತ್ತದೆ. ಸಮುದಾಯಗಳು ಮಾನವ ಜೀವನಕ್ಕೆ ಬೇಕಾಗುವ ಅಗತ್ಯ ವಸ್ತು ,ಪದಾರ್ಥಗಳನ್ನು ತಮ್ಮ ನೆಲೆಯಲ್ಲಿ ಉತ್ಪಾದಿಸಿ ಒದಗಿಸುತ್ತದೆ. ಅಂದರೆ ವಿವಿಧ  ಲಕ್ಷಣಗಳು ಮತ್ತು ವೃತ್ತಿ ಅವಲಂಬನೆ ,ಆಹಾರ ಉತ್ಪಾದಿಸುವ ಕ್ರಮ , ಆಹಾರ ಬಳಕೆಯ ಕ್ರಮ, ವಾಸದ ನೆಲೆ,  ಆರೋಗ್ಯ ಶಿಕ್ಷಣ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳ ದೊರೆಯುವಿಕೆ ಇತ್ಯಾದಿ ಸೌಲಭ್ಯಗಳನ್ನು ಸಮುದಾಯಗಳು ಪಡೆದುಕೊಳ್ಳುತ್ತವೆ. ಅರ್ಹ ವಯಸ್ಸಿನ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಕೊಡಿಸುವುದು ಸಮುದಾಯದ ಕರ್ತವ್ಯವಾಗಿದೆ .ಶಾಲೆಯ ಅಭಿವೃದ್ಧಿ ಹಾಗೂ ಅಪೇಕ್ಷಿತ ಬದಲಾವಣೆಗಾಗಿ ಸ್ಥಳೀಯ ಸಮುದಾಯದ ಪಾಲ್ಗೊಳ್ಳುವಿಕೆ ಅತ್ಯಂತ ಅಗತ್ಯವಾಗಿದೆ.

**ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣ ಅನುಷ್ಠಾನ ಮಾಡುವಲ್ಲಿ ದ್ವಿತೀಯ ಹಂತದ ಭಾಗೀದಾರರನ್ನು ತೊಡಗಿಸಿಕೊಳ್ಳುವುದು ಹೇಗೆ ? ಯಾವ ಯಾವ ಕ್ಷೇತ್ರಗಳಲಿ? ಪರಿಶೋಧಿಸಿ**

ಸ್ಥಳೀಯ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಖಚಿತ ಪಡಿಸಿಕೊಳ್ಳುವುದು ಹಾಗೂ ಅವರನ್ನು ಗುಣಾತ್ಮಕ

**ಹಾಗಾದರೆ, ಶಾಲೆ ಮತ್ತು ಸಮುದಾಯದ ನಡುವೆ ಉತ್ತಮ ಬಾಂಧವ್ಯ ವೃದ್ಧಿ ಮಾಡುವುದು ಹೇಗೆ ? ಚಿಂತಿಸಿ.**

ಶಿಕ್ಷಣದ ಭಾಗೀದಾರರನ್ನಾಗಿಸುವ ಪ್ರಯತ್ನ ಮಹತ್ವ ಪಡೆದಿದೆ.ಶಾಲೆಯ ಭಾಗೀದಾರರಾದ ಎಸ್,ಡಿ,ಎಂ,ಸಿ ,ಸಮುದಾಯ,ಜನಪ್ರತಿನಿಧಿಗಳು, ಪೋಷಕರು, ದಾನಿಗಳು, ಎನ್‌ಜಿಓಗಳು, ಹಳೆಯ ವಿದ್ಯಾರ್ಥಿ ಸಂಘಗಳು ಸೇರಿದಂತೆ ಸಭೆ ಕರೆಯಬೇಕು. ಸಭೆಯಲ್ಲಿ ಮಕ್ಕಳ ಕಲಿಕಾ ಪ್ರಗತಿ, ಶಾಲಾ ಶೈಕ್ಷಣಿಕ ಗುಣಮಟ್ಟ, ಶಾಲಾ ಭೌತಿಕ ಸೌಲಭ್ಯಗಳ ಬಗ್ಗೆ ಚರ್ಚಿಸುವುದು. ಶಾಲೆಯ ಉತ್ತಮ ಅಂಶಗಳು ,ಕೊರತೆಯ ಅಂಶಗಳನ್ನು ಹಂಚಿಕೊಳ್ಳಲು ಇದಕ್ಕಿಂತ ಉತ್ತಮ ವೇದಿಕೆ ಮತ್ತೊಂದಿಲ್ಲ. ಇದೇ ಸಮಯದಲ್ಲಿ ಶಾಲೆಗೆ ಕೊಡುಗೆ ನೀಡಿದವರನ್ನು ಸನ್ಮಾನಿಸುವ ಮೂಲಕ ಸಮುದಾಯದವರನ್ನು ಶಾಲಾ ಪ್ರಗತಿಗೆ ಜೋಡಿಸುವಂತೆ ಮಾಡಬಹುದು. ಶಾಲೆಗೆ ಸ್ಥಳೀಯವಾಗಿ ಸಂಪನ್ಮೂಲ ಸಂಗ್ರಹಿಸುವ, ಸಮುದಾಯದ ಕೊಡುಗೆಯನ್ನು ಪಡೆಯುವ ನಿಟ್ಟಿನಲ್ಲಿ ಚಿಂತಿಸಲು ಅಗತ್ಯ ಕ್ರಮಗಳನ್ನು ರೂಪಿಸಬೇಕು. ಇದಕ್ಕಾಗಿ ಶಾಲೆಯ ಅಗತ್ಯತೆಗಳನ್ನು ನಿರ್ಧರಿಸುವುದು, ಗರಿಷ್ಠವಾಗಿ ಮತ್ತು ಸೂಕ್ತವಾಗಿ ಲಭ್ಯ ಸಂಪನ್ಮೂಲಗಳನ್ನು ಗುರುತಿಸುವುದು. ಶಾಲಾಭಿವೃದ್ಧಿಗಾಗಿ ಅವುಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಲು ಯೋಜಿಸುವುದು. ಈ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಬೇಕು.

ಶಾಲೆಯ ಕಾರ್ಯಕ್ರಮಗಳಿಗೆ ಸಮುದಾಯದವರನ್ನು ಆಹ್ವಾನಿಸುವುದು, ಸ್ಥಳೀಯ ಸಮುದಾಯದ ಕಾರ್ಯಕ್ರಮಗಳಲ್ಲಿ ಮಕ್ಕಳ ಪ್ರತಿಭೆ/ಕಲಿಕಾ ಪ್ರದರ್ಶನಕ್ಕೆ ವೇದಿಕೆ ರೂಪಿಸುವುದು ಶಾಲೆ ಮತ್ತು ಸಮುದಾಯದ ಬಾಂಧವ್ಯ ವೃದ್ಧಿಗೆ ಸಹಕಾರಿ.

**ವಿದ್ಯಾರ್ಥಿಗಳಲ್ಲಿನ ಕುತೂಹಲ, ಆಸಕ್ತಿಯನ್ನು ತಣಿಸಲು ಸಮುದಾಯವನ್ನು ಹೇಗೆ ತೊಡಗಿಸಿಕೊಳ್ಳಬಹುದು ಯೋಚಿಸಿ?**

- ರಾಷ್ಟ್ರೀಯ ಹಬ್ಬಗಳು, ಕನ್ನಡ ರಾಜ್ಯೋತ್ಸವ, ಶಾಲಾ ವಾರ್ಷಿಕೋತ್ಸವ ಇತ್ಯಾದಿ.
- ಕ್ರೀಡಾಕೂಟಗಳು-ಸ್ಥಳೀಯ ಪರಿಣಿತರಿಂದ (ಕ್ರೀಡಾ ಪಟುಗಳು) ಕೋಚಿಂಗ್ ಕೊಡಿಸಬಹುದು. ಸ್ಥಳೀಯವಾಗಿ ಕ್ರೀಡೆಗಳ ಆಯೋಜನೆ ಮಾಡಬಹುದು.

- ಶಾಲಾ ವನದ ನಿರ್ಮಾಣ (ಶಾಲಾ ಕೈತೋಟ)
- ಬಿಸಿಯೂಟ ಕಾರ್ಯಕ್ರಮದಲ್ಲಿ ತಾಯಂದಿರ ಸಹಕಾರ
- ಸಮುದಾಯದ ಕಾರ್ಯಕ್ರಮಗಳಲ್ಲಿ ಮಕ್ಕಳ ಪ್ರತಿಭೆ ಪ್ರದರ್ಶನ- ಜಾತ್ರೆ, ಊರಿನ ಹಬ್ಬಗಳು
- ಒಳಗೊಳ್ಳುವಿಕೆ- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ಸಮುದಾಯವು ಮುಂದಾಗಬೇಕು.

**ಕಲಿಕಾ ಸಂಪನ್ಮೂಲವಾಗಿ ಸಮುದಾಯ**

ಶಾಲೆಯ ವಿವಿಧ ವಿಷಯಗಳು ಮತ್ತು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಸ್ಥಳೀಯ ಸಮುದಾಯದ ಜ್ಞಾನ ಮತ್ತು ಕೌಶಲಗಳನ್ನು ಯೋಜಿತ ಮತ್ತು ಸಂಘಟಿತ ಕ್ರಮದಲ್ಲಿ ಸಮನ್ವಯಗೊಳಿಸುವುದು. ವಿದ್ಯಾರ್ಥಿಗಳಲ್ಲಿ ನಿರ್ದಿಷ್ಟ ವೃತ್ತಿಪರ ಕೌಶಲ್ಯಗಳ ಬೆಳವಣಿಗೆಗಾಗಿ ಸಮುದಾಯ/ ಗ್ರಾಮವನ್ನು ಕಲಿಕಾ ಪರಿಸರವನ್ನಾಗಿ ಬಳಸಿಕೊಳ್ಳಬಹುದು.

- ಬಡಗಿ, ಕಮ್ಮಾರ, ಕುಂಬಾರ, ಚಮ್ಮಾರ, ಕೃಷಿಕ(ರೈತ), ಪ್ಲಂಬರ್
- ಕುಶಲ ಕರ್ಮಿಗಳು-ಬುಟ್ಟಿ ಹೆಣೆಯುವುದು, ಕಸೂತಿ , ಗೊಂಬೆ ತಯಾರಿಕೆ ಇತ್ಯಾದಿ.
- ಕಲಾವಿದರು- ನಾಟಕ, ಕೋಲಾಟ, ಜನಪದ ನೃತ್ಯ , ಲಾವಣಿ, ಸ್ಥಳೀಯ ಕಲೆಗಳು
- ಕಂಪ್ಯೂಟರ್ ಶಿಕ್ಷಣ - ಮಾಹಿತಿ ತಂತ್ರಜ್ಞಾನ – ಸ್ಥಳೀಯವಾಗಿ ಲಭ್ಯವಿರುವ ಇಂಜಿನಿಯರ್‌ಗಳ ಮೂಲಕ.
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್
- ಮಿಲಿಟರಿ ಸೇವೆ ಸಲ್ಲಿಸಿದ ಸ್ಥಳೀಯ ವ್ಯಕ್ತಿಗಳೊಂದಿಗೆ ಸಂವಾದ - ದೇಶ ಸೇವೆ, ದೇಶಭಕ್ತಿ.
- ಬ್ಯಾಂಕ್, ಅಂಚೆ ಕಛೇರಿ, ಹಾಲಿನ ಡೈರಿ ಗ್ರಾಮ ಪಂಚಾಯಿತಿಗಳ ಕಾರ್ಯವೈಖರಿ ಬಗ್ಗೆ ಸಂಬಂಧಿಸಿದ

  ಅಧಿಕಾರಿಗಳಿಂದ ಮಾಹಿತಿ ಕೊಡಿಸುವುದು ಮತ್ತು ಕಚೇರಿಗಳಿಗೆ ಮಕ್ಕಳನ್ನು ಭೇಟಿ ಮಾಡಿಸುವುದು.

- ಸ್ಥಳೀಯವಾಗಿ ಲಭ್ಯವಿರುವ ನರ್ಸ್, ಡಾಕ್ಟರ್‌ಗಳಿಂದ ಮಕ್ಕಳಿಗೆ, ಪೋಷಕರಿಗೆ ಆರೋಗ್ಯ ತಪಾಸಣೆ, ಆರೋಗ್ಯದ ಅರಿವು ಕಾರ್ಯಕ್ರಮಗಳು .
- ಪ್ರಥಮ ಚಿಕಿತ್ಸೆ ,ಬಾಯಿಯ ಆರೋಗ್ಯ, ಕಣ್ಣುಗಳ ರಕ್ಷಣೆ , ಕಿವಿಗಳ ಆರೋಗ್ಯ, ಸಾಂಕ್ರಾಮಿಕ ರೋಗಗಳು, ತಾಯಿ ಮಕ್ಕಳ ಆರೋಗ್ಯದ ಬಗ್ಗೆ ಅರಿವು ಕಾರ್ಯಕ್ರಮಗಳು ಇತ್ಯಾದಿ.

- ಸಮುದಾಯವು ಶಾಲೆಗೆ ಅಗತ್ಯವಾದ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಬೇಕು.
- ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯಗಳು, ಪೀಠೋಪಕರಣಗಳು, ಆಟೋಪಕರಣಗಳು (ಕ್ರೀಡೋಪಕರಣಗಳು) ಕಲಿಕೋಪಕರಣಗಳ ಸಂಗ್ರಹ ಇತ್ಯಾದಿ

**ಸಮುದಾಯದ ಸಬಲೀಕರಣದಲ್ಲಿ ಶಾಲೆಯ ಪಾತ್ರ ಚರ್ಚಿಸಿ**

ಶಾಲೆಯು ಸಮುದಾಯದ ಒಂದು ಭಾಗ. ಶಾಲೆಯು ಸಮುದಾಯದ ಹಿತಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

- ಸ್ವಚ್ಛತಾ ಆಂದೋಲನ, ಆರೋಗ್ಯ ಸಾಕ್ಷರತಾ ಮೇಳ , ಲಿಂಗ ಮತ್ತು ಸಾಮಾಜಿಕ ತಾರತಮ್ಯಗಳ ವಿರುದ್ಧ ಜಾಗೃತಿ
- ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಮೂಡಿಸುವುದು - ಬೀದಿ ನಾಟಕಗಳ ಮೂಲಕ ಬಾಲ್ಯ ವಿವಾಹ, ಬಾಲಾಪರಾಧ, ಬಾಲಕಾರ್ಮಿಕರು, ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಮಕ್ಕಳ ರಕ್ಷಣೆ ಮತ್ತು ಸುರಕ್ಷತೆ, ಸೈಬರ್ ಸುರಕ್ಷತೆ, ಮಾದಕ ದ್ರವ್ಯ ವ್ಯಸನ, ಮದ್ಯಪಾನ, ತಂಬಾಕು ಸೇವನೆ ಇತ್ಯಾದಿ ವಿಚಾರಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಸಮುದಾಯದ ಸ್ವಾಸ್ಥ್ಯವನ್ನು ಕಾಪಾಡಬಹುದು.

**ಸರ್ಕಾರೇತರ ಸಂಸ್ಥೆಗಳು (ಎನ್. ಜಿ. ಒ) ಮತ್ತು ದಾನಿಗಳು**

ಸಮಾಜದ ಭಾಗವಾದ ಸರ್ಕಾರೇತರ ಸಂಸ್ಥೆಗಳು ,ಸ್ವಯಂ ಸೇವಾ ಸಂಸ್ಥೆಗಳು, ದಾನಿಗಳು ತಮ್ಮ ಕೊಡುಗೆಯನ್ನು ಶಾಲೆಗೆ ನೀಡುತ್ತಾ ಬಂದಿದ್ದಾರೆ .ಸರ್ಕಾರಿ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುವ ಸ್ವಯಂ ಪ್ರೇರಿತ ಗುಂಪುಗಳಾಗಿದ್ದು, ಸಮಾಜಕ್ಕೆ ಸಹಾಯ ಮಾಡಲು ಬಯಸುವ ಸಮಾನ ಮನಸ್ಸಿನ ಜನರಿಂದ ರಚಿಸಲ್ಪಟ್ಟಿರುತ್ತವೆ. ತಮ್ಮದೇ ಆದ ನಿಯಮಗಳು, ನಿಬಂಧನೆಗಳು, ನೀತಿ ಕಾರಣಗಳನ್ನು ಅವಲಂಬಿಸಿ ಕಾರ್ಯನಿರ್ವಹಿಸುತ್ತವೆ. ಸರ್ಕಾರದ ಮಂಜೂರಾತಿ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸಮಾಜದ ಕಳಕಳಿ ಮತ್ತು ಸೇವಾಮನೋಭಾವದಿಂದ ಸಮಾಜದ ಉನ್ನತಿಗಾಗಿ ಕೆಲಸ ಮಾಡುವ ಸಂಸ್ಥೆಯಾಗಿರುತ್ತವೆ. ತನ್ನದೇ ಆದ ಸ್ಪಷ್ಟ ಧ್ಯೇಯೋದ್ದೇಶ ಮತ್ತು ನಿರ್ಧಿಷ್ಟ ಕಾರ್ಯಕ್ರಮಗಳನ್ನು ಹೊಂದಿದ್ದು ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸುತ್ತವೆ.

**ಸರ್ಕಾರೇತರ ಸಂಸ್ಥೆಗಳ (ಎನ್.ಜಿ.ಒ)ಸೇವೆಯನ್ನು ಗುಣಾತ್ಮಕ ಶಿಕ್ಷಣದ ಅನುಷ್ಠಾನಕ್ಕೆ ಬಳಸಿಕೊಳ್ಳುವುದು ಹೇಗೆ ?**

"ನವೀನ ಬೋಧನಾ ವಿಧಾನಗಳು, ಪಠ್ಯಕ್ರಮ ಅಭಿವೃದ್ಧಿ ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ವರ್ಧಿಸಬಹುದು". ಈ ಕೆಳಕಂಡ ಕ್ಷೇತ್ರಗಳಲ್ಲಿ ಎನ್. ಜಿ. ಒ ರವರು ಕಾರ್ಯ ನಿರ್ವಹಿಸುತ್ತಿದ್ದು ಗುಣಾತ್ಮಕ ಕಲಿಕೆಗೆ ಸಹಕಾರಿಯಾಗಿದೆ.

**ನಿರ್ಧಿಷ್ಟ ಕಲಿಕಾಫಲಗಳ ನಿರೀಕ್ಷಿತ ಕಲಿಕಾ ಸಾಧನೆಗಾಗಿ**

**1.ತರಬೇತಿಗಳು**

- ಇಂಗ್ಲೀಷ್ ಭಾಷಾ ತರಗತಿ ನಿರ್ವಹಣೆಗೆ ಶಿಕ್ಷಕರಿಗೆ ಸ್ಪೋಕನ್ ಇಂಗ್ಲೀಷ್ ತರಬೇತಿ ನೀಡುವುದು.
- ಕಲಿಕಾಫಲ ಆಧಾರಿತ ತರಗತಿ ನಿರ್ವಹಣೆಗೆ ಶಿಕ್ಷಕರಿಗೆ ತರಬೇತಿ ನೀಡುವುದು.
- ಐ ಸಿ ಟಿ ಆಧಾರಿತ ಕಲಿಕೆ & ಬಳಕೆ ಬಗ್ಗೆ ತರಬೇತಿ ನೀಡುವುದು
- ಕ್ರೀಡೋಪಕರಣಗಳನ್ನು ಒದಗಿಸುವುದು ಇತ್ಯಾದಿ.
- ಶಾಲೆಗಳಲ್ಲಿ ಗ್ರಂಥಾಲಯ ಸ್ಥಾಪನೆ ಮತ್ತು ನಿರ್ವಹಣೆ ತರಬೇತಿ ನೀಡುವುದು ಇತ್ಯಾದಿ.

**2, ಉತ್ತಮ ಕಲಿಕಾ ಪರಿಸರ ನಿರ್ಮಾಣ**

- ಮೂಲಭೂತ ಸೌಕರ್ಯಗಳು - ಆಧುನಿಕ ಶೌಚಾಲಯ ನಿರ್ಮಾಣ, ಶುದ್ಧ ಕುಡಿಯುವ ನೀರು ಇತ್ಯಾದಿ
- ·ವಿದ್ಯುತ್ತಿಗೆ ಪರ್ಯಾಯವಾಗಿ ಸೌರಶಕ್ತಿ
- ತರಗತಿ ಕೋಣೆ ಮತ್ತು ವಿಜ್ಞಾನ ಪ್ರಯೋಗಾಲಯಗಳು
- STEM ಲ್ಯಾಬ್ ಗ್ರಂಥಾಲಯ, ಸಂಖ್ಯಾಶಾಸ್ತ್ರ,/ ಗಣಿತ ಪ್ರಯೋಗಾಲಯಗಳ ಸ್ಥಾಪನೆ/ನವೀಕರಣ
- ಪೀಠೋಪಕರಣಗಳು ಮತ್ತು ಕಂಪ್ಯೂಟರ್ ಗಳನ್ನು ಒದಗಿಸುವುದು

**3. ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ**

- ತರಗತಿ ನಿರ್ವಹಣೆ, ವಿಷಯ ಜ್ಞಾನ
- ಮಕ್ಕಳ ಶಿಕ್ಷಣ ಮತ್ತು ಯೋಗಕ್ಷೇಮ
- ಬೋಧನಾ- ಕಲಿಕಾ ಸಾಧನಗಳು
- ಡಿಜಿಟಲ್ ಸಾಧನಗಳ ಬಳಕೆ /ತಂತ್ರಜ್ಞಾನ






**Science Drawing at Schools**

**New Boy's Toilet**








**Play Materials**

**Hand wash platform**

**Library Books**

**3. ದತ್ತು ಯೋಜನೆ-** ಆರ್ಥಿಕವಾಗಿ ಹಿಂದುಳಿದ/ ಪ್ರತಿಭಾವಂತ ಮಕ್ಕಳನ್ನು ಶೈಕ್ಷಣಿಕವಾಗಿ ದತ್ತು ತೆಗೆದುಕೊಂಡು ಪದವಿ /ಉದ್ಯೋಗ ಗಳಿಸುವವರೆಗೆ ಆರ್ಥಿಕ ಸಹಾಯ ಮಾಡುವುದು ಸಾಮಾಜಿಕ ಕಳಕಳಿಯಾಗಿದೆ.

**ಜನಪ್ರತಿನಿಧಿಗಳು**

ಮಕ್ಕಳಿಗೆ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಭಾಗೀದಾರರಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತ್ , ಶಾಸಕರು, ಸಂಸದರು ಹಾಗೂ ವಿಧಾನ ಪರಿಷತ್ ಸದಸ್ಯರು ಎಲ್ಲಾ ಹಂತದ ಜನಪ್ರತಿನಿಧಿಗಳನ್ನು ತೊಡಗಿಸಿಕೊಳ್ಳಬಹುದು .

**ಪ್ರತಿಯೊಬ್ಬರೂ ತಮ್ಮ ಹೊಣೆಗಾರಿಕೆಗಳನ್ನು ಕುರಿತು ಚಿಂತಿಸಿ, ಬದ್ಧತೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡುವುದು ಹೇಗೆ ?**

**ಕೆಲವು ಉತ್ತಮ ಉದಾಹರಣೆಗಳಿವೆ**

- ಗ್ರಾಮ ಪಂಚಾಯಿತಿಯ ಗ್ರಂಥಾಲಯ - ಡಿಜಿಟಲ್ ಗ್ರಂಥಾಲಯ ಮಕ್ಕಳ ಬಳಕೆಗೆ ಮುಕ್ತ ಅವಕಾಶ ಕಲ್ಪಿಸುವುದು.

- OOSC ಮಕ್ಕಳನ್ನು ಶಾಲೆಗೆ ಕರೆತರುವುದು .
- ಪೋಷಕರಿಗೆ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವುದು
- ಕ್ಷೇತ್ರ ಭೇಟಿ – ಗ್ರಂಥಾಲಯ, ಗ್ರಾಮ ಪಂಚಾಯಿತಿಗಳಿಗೆ ಭೇಟಿ ಮಾಡಿಸುವುದು, ಜನಪ್ರತಿನಿಧಿಗಳ ಅನುದಾನದಲ್ಲಿ ಶಾಲಾ ಸೌಲಭ್ಯಗಳನ್ನು ಒದಗಿಸುವುದು.

ಉದಾ:- ಶೌಚಾಲಯ, ಕುಡಿಯುವ ನೀರು, ಶಾಲಾ ಕಾಂಪೌಂಡ್, ಅಡುಗೆಕೋಣೆ, ಆಟೋಪಕರಣಗಳು , ಪೀಠೋಪಕರಣಗಳು, ಶಾಲಾ ಆಸ್ತಿ ರಕ್ಷಣೆ ಇತ್ಯಾದಿ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವುದು.

- ·ಶಾಲಾ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಹಾಗೂ ಪ್ರೋತ್ಸಾಹ ಬೆಂಬಲ ನೀಡುವುದು-ಶಾಲಾವಾರ್ಷಿಕೋತ್ಸವ, ಕ್ರೀಡಾಕೂಟಗಳ ಆಯೋಜನೆ, ರಾಷ್ಟ್ರೀಯ ಹಬ್ಬಗಳ ಆಚರಣೆ ಇತ್ಯಾದಿ
- ಆರ್ಥಿಕವಾಗಿ ದುರ್ಬಲ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು
- ·ದಾನಿಗಳನ್ನು ಸಂಪರ್ಕಿಸಿ ಶಾಲೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು
- ·ತಮ್ಮ ಕ್ಷೇತ್ರದ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಎಲ್ಲಾ ರೀತಿಯ ಸಹಕಾರ ನೀಡುವುದು ಅತ್ಯವಶ್ಯಕವಾಗಿದೆ.
- ಎಲ್ಲಾ ಜನಪ್ರತಿನಿಧಿಗಳು ತಮ್ಮ ಅನುದಾನದಲ್ಲಿ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಇತ್ಯಾದಿ.

- **ಇತರೆ ಇಲಾಖೆಗಳ ಸಹಕಾರ**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಬಿಸಿಎಂ, ಅಲ್ಪಸಂಖ್ಯಾತ, ಅರಣ್ಯ ಇಲಾಖೆ, ಪಶು ಸಂಗೋಪನಾ ಇಲಾಖೆ, ಕೃಷಿ ಇಲಾಖೆ, ಮಕ್ಕಳ ರಕ್ಷಣಾ ಘಟಕ, ತೋಟಗಾರಿಕೆ, ಆರೋಗ್ಯ, ಕಾರ್ಮಿಕ ಇಲಾಖೆ ಮುಂತಾದ ಅಗತ್ಯ ಇಲಾಖೆಗಳ ಸಹಕಾರ ವನ್ನು ಪಡೆಯುವುದು. ಹೀಗೆ ಎಲ್ಲ ಭಾಗೀದಾರರ ಸಾಮೂಹಿಕ ಪ್ರಯತ್ನದಿಂದ ಮಾತ್ರ ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ಸಾಧಿಸಬಹುದು.

**ಮೌಲ್ಯಮಾಪನ ಪ್ರಶ್ನೆಗಳು;-**

1. **ಗುಣಾತ್ಮಕ ಶಿಕ್ಷಣದ ಭಾಗೀದಾರರು ಯಾರು ?**

2. **ಗುಣಾತ್ಮಕ ಶಿಕ್ಷಣದಲ್ಲಿ ಪೋಷಕರ ಪಾತ್ರ ತಿಳಿಸಿ.(2 ಅಂಶಗಳನ್ನು ಬರೆಯಿರಿ).**

3. **ಶಾಲೆ ಮತ್ತು ಸಮುದಾಯದ ನಡುವೆ ಉತ್ತಮ ಬಾಂಧವ್ಯ ವೃದ್ಧಿ ಮಾಡುವುದು ಹೇಗೆ? ( 3 ಅಂಶಗಳನ್ನು ಬರೆಯಿರಿ)**

4. **ಗುಣಾತ್ಮಕ ಶಿಕ್ಷಣದಲ್ಲಿಎನ್ ಜಿ.ಓ ಗಳ ಪಾತ್ರ ತಿಳಿಸಿ.(4 ಅಂಶಗಳನ್ನು ಬರೆಯಿರಿ).**

## 3.2 ವಿವಿಧ ಭಾಗೀದಾರರನ್ನು ಶಾಲಾ ಪ್ರಕ್ರಿಯೆಗಳಿಗೆ ಹೊಂದಿಸಿಕೊಳ್ಳುವ ಕ್ರಮಗಳು :-

ಪ್ರತೀ ಮಗುವಿನ ಉತ್ತಮ ಭವಿಷ್ಯಕ್ಕಾಗಿ ಹಾಗೂ ಗುಣಮಟ್ಟದ ಶಿಕ್ಷಣ ದೊರೆಯಲು ಪೂರಕ ವಾತಾವರಣ ನಿರ್ಮಿಸುವಲ್ಲಿ ಶಿಕ್ಷಕರು, ತಂದೆ- ತಾಯಿ, ಪೋಷಕ, ಎಸ್.ಡಿ.ಎಂ.ಸಿ, ಸಂಸ್ಥೆಗಳು, ಪರಿಸರ ಮತ್ತು ಸಮುದಾಯದ ಪಾತ್ರ ಮಹತ್ತರವಾಗಿದೆ . ಇವರೆಲ್ಲರೊಟ್ಟಿಗಿನ ಸಹಭಾಗಿತ್ವವು ಪರಿಣಾಮಕಾರಿ ಶಾಲಾ ಅಭಿವೃದ್ಧಿಗೆ ಬೆಂಬಲಿಸಿ ಸುಸ್ಥಿರತೆಯನ್ನೂ ಕಾಪಾಡುತ್ತದೆ. ಸಂವಿಧಾನದ ಆಶಯಕ್ಕೆ ಪೂರಕವಾಗಿ ಎನ್.ಸಿ.ಎಫ್. 2005 ಸಹ ಭಾಗೀದಾರರ ಸಹಭಾಗಿತ್ವಕ್ಕೆ ಒತ್ತು ನೀಡಿದೆ ಹಾಗೂ ಸರ್ವ ಶಿಕ್ಷಣ ಅಭಿಯಾನವು ಎಲ್ಲಾ ಭಾಗೀದಾರರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುತ್ತದೆ ಮಾತ್ರವಲ್ಲ, ಸಮುದಾಯಗಳ ನಡುವೆ ಹೊಣೆಗಾರಿಕೆಯನ್ನು ಮತ್ತು ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ. ಈ ನಿಟ್ಟಿನಲ್ಲಿ ಮುಖ್ಯ ಶಿಕ್ಷಕರು ತಮ್ಮ ಶಾಲಾಭಿವೃದ್ಧಿಯಲ್ಲಿ ಭಾಗೀದಾರರನ್ನು ಒಳಗೊ:ಳಿಸುವ ಅವಶ್ಯಕತೆ ಇದೆ.

**ಶಾಲೆ ಮತ್ತು ಸಮುದಾಯವನ್ನು ಬೆಸೆಯುವುದು ಹೇಗೆ?**

**: ಒಮ್ಮೆ ಸಕಾರಾತ್ಮಕ ಮನಸಿಟ್ಟು ಈ ಕಥೆಯನ್ನು ಓದಿ :**

ಅದೊಂದು ಸರ್ಕಾರಿ ಪ್ರೌಢಶಾಲೆ. ಜಿಲ್ಲಾ ಕೇಂದ್ರದಿಂದ ಸುಮಾರು 80 ಕಿ.ಮೀ ದೂರವಿರುವ ಪ್ರೌಢಶಾಲೆ. ಸುಮಾರು 80ಕ್ಕಿಂತಲೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ಮಕ್ಕಳ ಸಂಖ್ಯೆ ಕಡಿಮೆಯಾದರೂ ಆ ಭಾಗದಲ್ಲಿ ಇಂತಹ ಶಾಲೆಯ ಅವಶ್ಯಕತೆ ಮತ್ತು ಅನಿವಾರ್ಯ ಕೂಡಾ ಹೌದು. ಆ ಭಾಗದ ಗ್ರಾಮೀಣ ಹೆಣ್ಣುಮಕ್ಕಳು ದೂರದ ಶಾಲೆಗಳಿಗೆ ತೆರಳಲು ಬಸ್ ಸೌಕರ್ಯವಿಲ್ಲದ ಕಾರಣ ಈ ಶಾಲೆಯು ಅಲ್ಲಿನ ಮಕ್ಕಳಿಗೆ ಅತ್ಯಾವಶ್ಯಕ. ಬೇರೆ ಜಿಲ್ಲೆಗೆ ಹೊಂದಿಕೊಂಡಂತಿರುವ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳ ಲಭ್ಯತೆ ಅಷ್ಟೇನೂ ಅನುಕೂಲಕರವಾಗಿರಲಿಲ್ಲ.ಯಾಕೆಂದರೆ ಆ ಶಾಲೆಯಲ್ಲಿ ಶಾಲಾ ಕಾಂಪೌಂಡ್ ಇಲ್ಲ, ಅಡುಗೆ ಕೋಣೆ ಇಲ್ಲದೆ ಶಾಲಾ ತರಗತಿಯಲ್ಲಿಯೇ ಊಟದ ತಯಾರಿ, ತರಗತಿ ಕೊಠಡಿಗಳು ಸುಣ್ಣ-ಬಣ್ಣ ನೋಡಿ ಹಲವು ವರ್ಷಗಳೇ ಕಳೆದಿವೆ. ಇದಕ್ಕಿಂತ ಅತೀ ಮುಖ್ಯವಾಗಿ ಶಾಲೆಯ ಶಿಕ್ಷಕರ ಕೊರತೆ. ಇಬ್ಬರು ಶಿಕ್ಷಕರ ಹೊರತು ಬೇರೆ ಶಿಕ್ಷಕರು ಇಲ್ಲ. ಕಾರಣ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರದಿಂದ ದೂರವಿರುವ ಶಾಲೆಯಾದ್ದರಿಂದ ಯಾವುದೇ ಶಿಕ್ಷಕರು ಶಾಲೆಗೆ ಸ್ಥಳ ಆಯ್ಕೆಗೆ ಹಿಂದೇಟು ಹಾಕುತ್ತಾರೆ.

2012 ನೇ ಇಸವಿಯಲ್ಲಿ ಇಬ್ಬರು ಶಿಕ್ಷಕರ ಜೊತೆಗೆ ಮುಖ್ಯಶಿಕ್ಷಕರೊಬ್ಬರು ಹೊಸದಾಗಿ ಸೇರ್ಪಡೆಯಾಗುತ್ತಾರೆ. ಆದರೇ ಕೆಲವೇ ತಿಂಗಳಲ್ಲಿ ಆ ಇಬ್ಬರೂ ಸಹಶಿಕ್ಷಕರು ಬೇರೆ ಶಾಲೆಗೆ ವರ್ಗಾವಣೆಗೊಳ್ಳುತ್ತಾರೆ. ಹೊಸದಾಗಿ ಬಂದ ಮುಖ್ಯಶಿಕ್ಷರಿಗೆ ಶಿಕ್ಷಕರ ಕೊರತೆ ತುಂಬುವ ಜೊತೆಗೆ ಹತ್ತಾರು ಸವಾಲುಗಳನ್ನು ನಿಭಾಯಿಸುವ ಜವಬ್ದಾರಿ. ಮಾದರಿ ಶಾಲೆಯನ್ನಾಗಿಸುವ ಕನಸನ್ನು ಹೊತ್ತು ಬಂದ ಮುಖ್ಯಶಿಕ್ಷರಿಗೆ ಹೇಗಾದರೂ ಸರಿಯೇ ಎಲ್ಲವನ್ನು ಸರಿಪಡಿಸಿಕೊಂಡು ಸಂಸ್ಥೆಯನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ಯಲೇಬೇಕೆಂಬ ಹಠ & ಛಲ.ಅದೊಂದು ದಿನ ಪೋಷಕರು ಹಾಗೂ ಎಸ್.ಡಿ.ಎಮ್.ಸಿ ಗಳ ಸಭೆಯನ್ನು ನಡೆಸಿ ಮುಖ್ಯಶಿಕ್ಷಕರ ದೂರದೃಷ್ಟಿಯ ಕನಸಿನ ಯೋಜನೆ ಬಗ್ಗೆ ಮತ್ತು ಶಾಲೆಯ ಪರಿಸ್ಥಿತಿ ಹಾಗೂ ಕೊರತೆಗಳ ಬಗ್ಗೆ ವಿವರವಾಗಿ ಮುಖ್ಯಶಿಕ್ಷಕರು ತಿಳಿಸಿಕೊಟ್ಟರು.ನಮ್ಮ ಯೋಚನೆಗಳು, ಯೋಜನೆಗಳು ಸಕಾರಾತ್ಮಕವಾಗಿದ್ದರೆ, ಪಾರದರ್ಶಕವಾಗಿದ್ದರೆ ಎಲ್ಲರೂ ನಮ್ಮೊಂದಿಗೆ ಕೈಗೂಡಿಸುತ್ತಾರೆ ಎಂಬ ವಾದಕ್ಕೆ ಪುಷ್ಟಿಯೆಂಬಂತೆ ಅಂದು ದೊರೆತ ಪೋಷಕರ ಹಾಗೂ ಎಸ್.ಡಿ.ಎಮ್.ಸಿ ಯವರ

ಬೆಂಬಲದ ಮಾತುಗಳು. ಮುಂದಿನ ಮೂರು ತಿಂಗಳಲ್ಲಿಯೇ ಗ್ರಾಮ ಪಂಚಾಯತಿ ವತಿಯಿಂದ ಅಡುಗೆ ಮನೆ ಹಾಗೂ ಕಾಂಪೌಂಡ್ ನಿರ್ಮಾಣವಾಯಿತು. ಶಾಲೆಗೆ ಆರ್.ಎಂ.ಎಸ್.ಎ ವತಿಯಿಂದ ಮೂರು ಕೊಠಡಿಗಳು ಅದೇ ವರ್ಷವೇ ಮಂಜೂರಾದವು.

ಮೂಲಭೂತ ಸೌಲಭ್ಯಗಳೇನೋ ತಕ್ಕಮಟ್ಟಿಗೆ ದೊರೆತ ನಂತರವೂ ಶಾಲೆಯ ಅತಿದೊಡ್ಡ ಸವಾಲು ಶಿಕ್ಷಕರ ಸಮಸ್ಯೆ. ಮುಖ್ಯಶಿಕ್ಷಕರ ಹಾಗೂ ವೃತ್ತಿ ಶಿಕ್ಷಕರು ಇಬ್ಬರೇ ಶಾಲೆಯನ್ನು ನಡೆಸಬೇಕಾದ ಅನಿವಾರ್ಯತೆ. ಆಗ ಶಾಲೆಯ ಬೆಂಬಲಕ್ಕೆ ಬಂದವರು ಆ ಭಾಗದ ಗ್ರಾಮ ಪಂಚಾಯತಿ ಸದಸ್ಯರು,ಪೋಷಕರು ಹಾಗೂ ಶಾಲಾ ಎಸ್.ಡಿ.ಎಂ.ಸಿ.ಯವರು. ಗ್ರಾಮ ಪಂಚಾಯತಿ ಸದಸ್ಯರೊಬ್ಬರು ತಮ್ಮ ಸ್ವಂತ ಹಣದಿಂದ ಇಬ್ಬರು ಶಿಕ್ಷಕರನ್ನು ಶಾಲೆಗೆ ನೇಮಕ ಮಾಡಿದರು. ಅದೇ ಊರಿನಲ್ಲಿ ಬಿ.ಇಡಿ , ಡಿ.ಇಡಿ ಪದವೀದರರು ಮುಖ್ಯಶಿಕ್ಷಕರ ಮನವಿಗೆ ಸ್ಪಂದಿಸಿ ಇಬ್ಬರು ಪ್ರಶಿಕ್ಷಣಾರ್ಥಿಗಳು ಶಾಲೆಗೆ ಬಂದು ಉಚಿತವಾಗಿ ಪಾಠ ಮಾಡುವಂತಾದರು. ಇಲಾಖೆಯಿಂದ ಇಬ್ಬರು ಅತಿಥಿ ಶಿಕ್ಷಕರು ದೊರೆತಿದ್ದರಿಂದ, ಇಡೀ ವರ್ಷ ಇಲಾಖೇತರ ಭಾಗೀದಾರರ ಸಹಕಾರದಿಂದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗದಂತೆ ಶಾಲೆಯನ್ನು ಮುನ್ನೆಡಿಸಿದ್ದಾಯಿತು. ಪರಿಣಾಮವಾಗಿ ಆ ವರ್ಷದ 10 ನೇ ತರಗತಿ ಪರೀಕ್ಷೆಯಲ್ಲಿ ಶಾಲಾ ಇತಿಹಾಸದಲ್ಲಿ ಮೊದಲ ಬಾರಿಗೆ ಶೇ 95.56 ಫಲಿತಾಂಶ ಪಡೆಯುವುದರ ಜೊತೆಗೆ ಇಡೀ ಹೋಬಳಿಯಲ್ಲಿ ಅತೀ ಹೆಚ್ಚು ಫಲಿತಾಂಶ ಪಡೆದ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಮುಂದಿನ ವರ್ಷ ಇಲಾಖೆಯಿಂದ ನಡೆಸಲಾಗುವ ಕ್ರೀಡಾಕೂಟದಲ್ಲಿ ಹೋಬಳಿ ಹಂತದ ಕ್ರೀಡಾಕೂಟವನ್ನು ನಡೆಸಿಕೊಡುವ ಅವಕಾಶ ಶಾಲೆಗೆ ದೊರೆಯಿತು. ಕ್ರೀಡಾಕೂಟ ಆಯೋಜಿಸಲು ಮೂಲಭೂತ ಸೌಕರ್ಯಗಳ ಲಭ್ಯತೆ ಇಲ್ಲದಿದ್ದರೂ,ಶಿಕ್ಷಕರು ಪೋಷಕರು ಹಾಗೂ ಜನಪ್ರತಿನಿಧಿಗಳ ಒತ್ತಾಸೆಗೆ ಅಲ್ಲಿಯೇ ಕ್ರೀಡಾಕೂಟವನ್ನು ನಡೆಸುವ ತೀರ್ಮಾನ ಮಾಡಲಾಯಿತು. ಸಭೆಯಲ್ಲಿ ಕ್ರೀಡಾಕೂಟಕ್ಕೆ ಅಗತ್ಯವಾದ ಬಹುಮಾನಗಳು, ಊಟೋಪಚಾರ ವ್ಯವಸ್ಥೆ, ಶಾಮಿಯಾನ ಮೈಕ್ ಸೆಟ್, ಇತ್ಯಾದಿ ಸೌಲಭ್ಯಗಳನ್ನು ಒದಗಿಸುವ ಖಚಿತತೆ ದೊರೆತದ್ದರಿಂದ ಕ್ರೀಡಾಕೂಟ ನಡೆಸಲು ಸುಗಮವಾಯಿತು. ಆದರೆ ಇದಕ್ಕೆ ಮೂಲ ಅಡ್ಡಿ ಇದ್ದದ್ದು ಆಟದ ಮೈದಾನದ ಕೊರತೆ ಯಾಕಂದ್ರೆ ಗುಡ್ಡದ ಮೇಲಿನ ಶಾಲೆಯಾಗಿದ್ದರಿಂದ ಹಾಗೂ ಶಾಲಾ ಮೈದಾನ ತಗ್ಗು ದಿಣ್ಣೆಗಳಿಂದ ಕೂಡಿದ್ದರಿಂದ ಕ್ರೀಡಾಕೂಟ ನಡೆಸಲು ಕಷ್ಟಕರವಾಗಿತ್ತು.

ಶಿಕ್ಷಕರ ಮನವಿಗೆ ಸ್ಪಂದಿಸಿದ ಭಾಗದ ಗ್ರಾಮ ಪಂಚಾಯತಿ ಸದಸ್ಯರು, ನಿವೃತ್ತ ಅಬಕಾರಿ ಇಲಾಖೆಯ ಅಧಿಕಾರಿಗಳ ಅಮೂಲ್ಯ ಸಹಕಾರದಿಂದ ಸುಮಾರು ಎರಡೂವರೆ ಲಕ್ಷ ರೂ.ಗಳನ್ನು ಖರ್ಚು ಮಾಡಿ ಸುಮಾರು 450 ಲೋಡ್ ಮಣ್ಣನ್ನು ಬೇರೆ ಕಡೆಯಿಂದ ತುಂಬಿಸಿದ ಮೇಲೆ ಸುಂದರ ಆಟದ ಮೈದಾನ ಸಿದ್ಧವಾಯಿತು. ಹೀಗೆ ಸಮುದಾಯದ ಭಾಗೀದಾರರ ಸಹಕಾರದಿಂದ ಆ ವರ್ಷದ ಹೋಬಳಿ ಹಂತದ ಕ್ರೀಡಾಕೂಟವನ್ನು ಉತ್ತಮ ರೀತಿಯಲ್ಲಿ ಆಯೋಜನೆ ಮಾಡಲು ಸಾಧ್ಯವಾಯಿತು. ಜೊತೆಗೆ ಶಾಲೆಯಲ್ಲಿ ತಾಲೂಕಿನಲ್ಲಿಯೇ ಉತ್ತಮವಾದ ಹಾಗೂ ಸುಸಜ್ಜಿತ ಆಟದ ಮೈದಾನ ಲಭ್ಯವಾಯಿತು.ಹೀಗೆ ಸಮುದಾಯದ ಸಹಕಾರ ಶಾಲೆಗೆ ನಿರಂತರವಾಗಿ ದೊರೆಯುವಂತಾಯಿತು.

**ಈಗ ಹೇಳಿ ಶಾಲೆಗೆ ಇಲಾಖೆಯಿಂದ ಸೌಲಭ್ಯವಿಲ್ಲವೆಂದು ಹೇಳಿ ಶಾಲಾ ಶಿಕ್ಷಕರು ಸುಮ್ಮನಿದ್ದರೆ ಇಷ್ಟೆಲ್ಲಾ ಸಹಕಾರ ದೊರೆಯುತ್ತಿತ್ತೇ?. ಶಾಲೆಗೆ ಇಂತಹ ಸಂದರ್ಭಗಳಲ್ಲಿ ಭಾಗೀದಾರರ ಅವಶ್ಯಕತೆ ಇದೆಯಲ್ಲವೇ?................!!!**

**ಅಥವಾ ಶಾಲಾ ಭಾಗೀದಾರರು ಕೈಜೋಡಿಸಿದರೆ ಎಂತಹ ಶಾಲೆಯನ್ನು ಬೇಕಾದರೂ ಮೇಲೆತ್ತರಕ್ಕೆ ಕೊಂಡೊಯ್ಯಬಹುದು ಅನಿಸುವುದಿಲ್ಲವೇ?................!!!**

**ಹಾಗಿದ್ದರೆ ಒಮ್ಮೆ ಈ ನಿಟ್ಟಿನಲ್ಲಿ ನಾವೆಲ್ಲರೂ ಯೋಚಿಸಿ.ಕನಿಷ್ಠ ಒಂದೊಂದು ಶಾಲೆಗಳನ್ನು ಮಾದರಿ ಶಾಲೆಗಳಾಗಿ ರೂಪಿಸುವಲ್ಲಿ ನಮ್ಮ ಪಾತ್ರವನ್ನು ಕಾರ್ಯರೂಪಕ್ಕೆ ತರೋಣ..**

ಒಬ್ಬ ಸಮರ್ಥ ಮುಖ್ಯ ಶಿಕ್ಷಕ, ಕ್ರಿಯಾಶೀಲ ತರಗತಿ ಶಿಕ್ಷಕರು ಸಮುದಾಯದ ಸಹಕಾರವನ್ನು ಯಥೋಚಿತವಾಗಿ, ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳುತ್ತಾ, ಸಮುದಾಯದ ಸಹಕಾರದ ಸವಾಲನ್ನು ಸಮರ್ಥವಾಗಿ ನಿಭಾಯಿಸಬಹುದು, ಶಾಲೆಯ ಶೈಕ್ಷಣಿಕ ಪ್ರಗತಿಗೆ ತಡೆಯಾದ ಹಲವಾರು ಭೌತಿಕ ಸವಾಲುಗಳನ್ನು ಸಮುದಾಯದ ಸಹಭಾಗಿತ್ವದಿಂದ ಬಗೆಹರಿಸಿಕೊಳ್ಳಬಹುದು. ಈ ದಿಕ್ಕಿನಲ್ಲಿ ಯಶಸ್ಸನ್ನು ಸಾಧಿಸಬಹುದು.

ಶೈಕ್ಷಣಿಕ ವ್ಯವಸ್ಥೆಯ ಸಬಲೀಕರಣದಲ್ಲಿ ಭಾಗವಹಿಸುವ ಭಾಗೀದಾರರನ್ನು ಗುರುತಿಸುವುದು ಇಂದು ಪ್ರಸ್ತುತವೂ ಮತ್ತು ಅತ್ಯಂತ ಅಗತ್ಯವೂ ಆಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಇರುವಂತೆಯೇ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಶ್ರಮಿಸುತ್ತಿರುವ ಹಾಗೂ ಅದರಿಂದ ಅಪಾರ ಪ್ರಯೋಜನಗಳನ್ನು ಪಡೆಯುತ್ತಿರುವ ಅನೇಕ ಜನವರ್ಗವಿದೆ. ಈ ವರ್ಗವನ್ನು ಭಾಗೀದಾರರೆಂದು ಕರೆಯಲಾಗುತ್ತದೆ. ಅಲ್ಲದೆ ಶೈಕ್ಷಣಿಕ ವಲಯವನ್ನು ಪ್ರಭಾವಿಸುವ ಮತ್ತು ಈ ವಲಯದಿಂದ ಪ್ರಭಾವಿಸಲ್ಪಡುವವರನ್ನು ಭಾಗೀದಾರರೆಂದು ಕರೆಯಬಹುದಾಗಿದೆ. ಪೋಷಕರು, SDMC, ಸದಸ್ಯರು, ವಿದ್ಯಾರ್ಥಿಗಳು, ಶಿಕ್ಷಕರು, ಶೈಕ್ಷಣಿಕ ಆಡಳಿತಗಾರರು, ಸ್ವಸಹಾಯ ಗುಂಪುಗಳು, ಸ್ವಯಂ ಸೇವಾ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು, ಶಿಕ್ಷಣ ಕ್ಷೇತ್ರದ ಪೂರಕ ಇಲಾಖೆಗಳು. ಉದಾ : ಆರೋಗ್ಯ, ಕಾರ್ಮಿಕ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಇವರೆಲ್ಲರೂ ಭಾಗೀದಾರರು.

**ಭಾಗೀದಾರರನ್ನು ಭಾಗವಹಿಸುವಂತೆ ಮಾಡಲು ಬಳಸಬಹುದಾದ ತಂತ್ರಗಳು :**

**ಚಟುವಟಿಕೆ: ನಿಮ್ಮ ಶಾಲೆಯಲ್ಲಿಸಮುದಾಯದ ಭಾಗೀದಾರರನ್ನು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಮಾಡಲು ಯಾವ ಯಾವ ತಂತ್ರಗಳನ್ನು ಅನುಸರಿಸುವಿರಿ? ಪಟ್ಟಿ ಮಾಡಿ.**

- ತರ್ಕಬದ್ದ ಚೌಕಟ್ಟಿನ ದೃಷ್ಟಿಕೋನದ ತಂತ್ರ
- ಗಮನ ಕೇಂದ್ರಿತ ಗುಂಪು ಚರ್ಚೆ
- ಪ್ರಶಂಸನಾತ್ಮಕ ವಿಚಾರಣೆಗಳು
- ಕಾರಣ ಕಂಡು ಹಿಡಿಯುವುದು, ಕನಸುಗಳನ್ನು ತಿಳಿಸುವುದು. ಕಾರ್ಯಸೂಚಿ ವಿನ್ಯಾಸಗೊಳಿಸುವುದು ಮತ್ತು ಮಾಹಿತಿ ವಿತರಣೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು
- ಪಾರದರ್ಶಕ ಮಾಹಿತಿ ಇರಬೇಕು. ಆಗ ಭಾಗೀದಾರರಲ್ಲಿ ಯಾವುದೇ ಸಂದೇಹಗಳು ಅನುಮಾನಗಳು ಇರುವುದಿಲ್ಲ.
- ಭಾಗೀದಾರರೊಂದಿಗೆ ಉತ್ತಮ ಭಾಂದವ್ಯ ಮತ್ತು ಶಾಲೆಯೊಂದಿಗೆ ನಿರಂತರ ಸಂಪರ್ಕದಲ್ಲಿರುವಂತೆ ನೋಡಿಕೊಳ್ಳುವುದು

ಸುತ್ತಲ ಪರಿಸರದ ಒಡನಾಟದಿಂದ, ಪ್ರಕೃತಿ, ವಸ್ತುಗಳು ಮತ್ತು ಜನ ಇವುಗಳೊಡನೆ ಒಡನಾಟ, ಭಾಷೆ ಮತ್ತು ಕ್ರಿಯೆಗಳಿಂದ ಕಲಿಕೆ ಸಾಧ್ಯವಾಗುತ್ತದೆ. ಶಿಕ್ಷಕ ತರಗತಿಯಲ್ಲಿ ವಿಚಾರಣೆ ಅನ್ವೇಷಣೆ, ಪ್ರಶ್ನಿಸುವುದು, ಚರ್ಚೆ, ಅನ್ವಯ ಮತ್ತು ಆತ್ಮವಿಮರ್ಶೆ ಮುಂತಾದ ಕ್ರಿಯೆಗಳಿಂದ ಪರಿಕಲ್ಪನೆಗಳನ್ನು ಹಾಗೂ ಹೊಸ ವೈಚಾರಿಕ ಚಿಂತನೆಯನ್ನು ಮಕ್ಕಳಲ್ಲಿ ಮೂಡಿಸಲು ಸೂಕ್ತ ಅವಕಾಶಗಳನ್ನು ಒದಗಿಸಬೇಕು.

ಶಿಕ್ಷಕರಿಗೆ ಮಕ್ಕಳಿಗೆ ಕಲಿಕೆಗೆ ಪೂರಕವಾಗುವಂತಹ ಕಲಿಕಾ ಅನುಭವಗಳನ್ನು ವಿನ್ಯಾಸಗೊಳಿಸುವುದು ಒಂದು ದೊಡ್ಡ ಸವಾಲು. ಶಿಕ್ಷಕರು ಮಕ್ಕಳ ಕಲಿಕೆಯ ಅಗತ್ಯ ಮತ್ತು ಬೇಡಿಕೆಗಳಿಗೆ ಸ್ಪಂಧಿಸಿ, ತಮ್ಮ ಬೋಧನಾ ವಿಧಾನಗಳನ್ನುತಾವೇ ಯೋಚಿಸಿ ಕೊಳ್ಳುವ ಮತ್ತು ಇದಕ್ಕೆ ಬೇಕಾದ ಸಾಮರ್ಥ್ಯವನ್ನು ಆತ್ಮವಿಶ್ವಾಸವನ್ನು ಪ್ರಷ್ಟೀಕರಿಸಿ ಕೊಳ್ಳಬೇಕು. ಎಲ್ಲಿಯವರೆಗೆ, ತರಗತಿಯಲ್ಲಿರುವ ಕುಂದು-ಕೊರತೆ, ನ್ಯೂನತೆಗಳ ಜೊತೆ ಹೊಂದಾಣಿಕೆ ಮಾಡಿಕೊಂಡು, ಲಭ್ಯವಿರುವ ಸಂಪನ್ಮೂಲವನ್ನು ಗರಿಷ್ಠವಾಗಿ ಬಳಸಿಕೊಂಡು ಪರಿಣಾಮಕಾರಿ ಪಾಠಬೋಧನೆ ಮೂಲಕ ಕ್ರಿಯಾಶೀಲ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬಲ್ಲವು ಎಂಬ ಸಂಕಲ್ಪವನ್ನು ನಮ್ಮ ತರಗತಿಯ ಶಿಕ್ಷಕ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ವೈವಿಧ್ಯಮಯ ತರಬೇತಿ, ಪರಿಶ್ರಮಗಳು ನಿರರ್ಥಕ. ಇವೆಲ್ಲವನ್ನು ಮೀರಿ ನಿಂತ ಶಿಕ್ಷಕನೇ ಸಾರ್ಥಕ ಹಾಗೂ ಹೆಮ್ಮೆ ಅಭಿಮಾನದ ದ್ಯೋತಕವಾಗಿರುತ್ತಾನೆ. ಈ ನಿಟ್ಟಿನಲ್ಲಿ ಎಲ್ಲ ಶಿಕ್ಷಕರ ಚಿಂತನೆ ಧನಾತ್ಮಕವಾಗಿರಲಿ, ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಾಮಾಣಿಕ ಪ್ರಕ್ರಿಯೆಯಾಗಲೀ ಎಂಬುದೇ ಇದರ ಧ್ಯೇಯವಾಗಿದೆ. ಪಿಪಿಟಿ ಪ್ರಶ್ನೆಗಳು

.

**ಈ ವರೆಗೆ ಓದಿದ ಎಲ್ಲಾ ಅಂಶಗಳನ್ನು ಪುನರ್ ಮನನ ಮಾಡಿಕೊಳ್ಳೋಣ.**

**3.3. ವಿವಿಧ ಭಾಗೀದಾರರ ಒಳಗೊಳ್ಳುವಿಕೆಯಿಂದ ಗುಣಾತ್ಮಕ ಶಿಕ್ಷಣ ನೀಡವಲ್ಲಿ ಯಶಸ್ವಿಯಾಗಿರುವ ಶಾಲೆಗಳ ಯಶೋಗಾಥೆಗಳನ್ನು ಅವಲೋಕಿಸಿ ಪ್ರೇರಣೆ ಪಡೆಯೋಣ**

**ಕಲಿಕಾ ಫಲಗಳು**

1. ಶಾಲೆಯ ಮುಖ್ಯ ಶಿಕ್ಷಕರು ಸಮುದಾಯದ ಮಾನವ ಸಂಪನ್ಮೂಲವನ್ನು ಗುರುತಿಸಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ವೃದ್ಧಿಗೊಳಿಸುವರು

2ಶಾಲೆಯ ಎಲ್ಲಾ ಭಾಗೀದಾರರೂ ಸಮುದಾಯದ ಭಾಗವಾಗಿ ಶೈಕ್ಷಣಿಕ ನಾಯಕತ್ವ ಸಾಧಿಸುವರು.

3.ಯಶಸ್ವಿಯಾಗಿರುವ ಶಾಲೆಗಳ ಯಶೋಗಾಥೆಗಳನ್ನು ಅವಲೋಕಿಸಿ ಪ್ರೇರಣೆ ಪಡೆಯುವರು

ಶಿಕ್ಷಣದ ಮುಖ್ಯ ಗುರಿ ಸಾರ್ವತ್ರಿಕವಾಗಿ ಗುಣಾತ್ಮಕ ಶಿಕ್ಷಣ ನೀಡುವುದಾಗಿದೆ. ಅದರಲ್ಲೂ 6 ರಿಂದ 18 ವರ್ಷದ ವರೆಗಿನ ಮಕ್ಕಳಿಗೆ ಗುಣಮಟ್ಟದ ಶಾಲಾ ಶಿಕ್ಷಣವನ್ನು ಒದಗಿಸಬೇಕೆಂಬುದು ಶಿಕ್ಷಣದ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಭಾಗೀದಾರರ ಸಹಭಾಗಿತ್ವದಲ್ಲಿ ಗುಣಾತ್ಮಕ ಶಿಕ್ಷಣದ ಸಾರ್ವತ್ರಿಕರಣದ ಅವಶ್ಯಕತೆ ಇದ್ದು, ಭಾಗೀದಾರರಾದ ಇಲಾಖೆ ಎಸ್.ಡಿ.ಎಂಸಿ ಪೋಷಕರು, ಶಿಕ್ಷಕರು ಎನ್‌ಜಿಓ ಇತ್ಯಾದಿ ಭಾಗೀದಾರರ ಒಳಗೊಳ್ಳುವಿಕೆಯಿಂದ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿರುವ ಅನೇಕ ಶಾಲೆಗಳಿದ್ದು, ಈ ಶಾಲೆಗಳು ಹೇಗೆ ಗುಣಾತ್ಮಕತೆಯನ್ನು ಹೆಚ್ಚಿಸಿವೆ ಎಂಬುದನ್ನು ತಿಳಿಯೋಣ. ಉತ್ತಮ ಒಳನೋಟಗಳನ್ನು ಪಡೆದು ನಮ್ಮ ಕಾರ್ಯಕ್ಷೇತ್ರಕ್ಕೆ ಅನ್ವಯಿಸೋಣ.

**ಭಾಗೀದಾರರಾದ ದಾನಿಗಳಿಂದ ಶಾಲೆಯ ಅಭಿವೃದ್ಧಿ**

ಕುಗ್ರಾಮದಲ್ಲಿ ಸರ್ಕಾರಿ ಶಾಲೆ ಇದೆ. ಇಲ್ಲಿ ಯಾವ ಸೌಕರ್ಯವಿದೆ ಎಂದು ಕೇಳುವುದಕ್ಕಿಂತ ಯಾವುದು ಇಲ್ಲ ಎಂದು ಕೇಳುವುದು ಸೂಕ್ತ. ಆದರೆ, ಈ ಶಾಲೆಯು ಸುತ್ತಮುತ್ತ ಇರುವ 42 ಗ್ರಾಮಗಳಲ್ಲಿಯೂ ಪ್ರಸಿದ್ಧಿ ಪಡೆದಿದೆ. ಸರ್ಕಾರಿ ಶಾಲೆಗಳನ್ನು ಕಂಡು ಮೂಗು ಮುರಿಯುವ ಕಾಲದಲ್ಲಿ ಶಿಕ್ಷಕರು ಮತ್ತು ಗ್ರಾಮದ ಮುಖಂಡರು ಇಚ್ಛಾಶಕ್ತಿ ತೋರಿ ಸರ್ಕಾರಿ ಶಾಲೆಯನ್ನು ಅದ್ಭುತವಾಗಿ ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಕಡಬ ಹೋಬಳಿಯ ಕಾಡುಶೆಟ್ಟಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉದಾಹರಣೆಯಾಗಿ ನಮ್ಮ ಮುಂದಿದೆ. ಈ ಶಾಲೆಗೆ ಹೋಗಬೇಕೆಂದರೆ ಸರಿಯಾದ ರಸ್ತೆ ವ್ಯವಸ್ಥೆ ಇಲ್ಲ, ಆದರೆ 42 ಗ್ರಾಮದ ಮಕ್ಕಳು ಈ ಶಾಲೆಗೆ ಬಂದು ವ್ಯಾಸಂಗ ಮಾಡುತ್ತಿದ್ದಾರೆ. ಹೋಬಳಿ ಕೇಂದ್ರದ ಶಾಲೆಗಳಿಗಿಂತಲೂ ಈ ಶಾಲೆಯು ಪೋಷಕರ ಗಮನ ಸೆಳೆದಿದೆ. ಬಡ ಮಕ್ಕಳಿಗೆ ಆಸರೆಯಾಗಿರುವ ಈ ಶಾಲೆಯಲ್ಲಿ LKG & UKG ಯಿಂದ ಎಂಟನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಅಚ್ಚುಕಟ್ಟಾದ ಶಾಲಾ ಆವರಣ, ಸುಸಜ್ಜಿತ ಕಟ್ಟಡಗಳು,ವಿಷಯವಾರು ಸಂಪನ್ಮೂಲ ಕೊಠಡಿಗಳು, ಲೈಬ್ರರಿ, ಸೈನ್ಸ್ ಲ್ಯಾಬ್, ಡಿಜಿಟಲ್ ಸಾಧನಗಳ ಸದ್ಬಳಕೆ, ಕಂಪ್ಯೂಟರ್ ಸೌಲಭ್ಯ, ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಇರುವ ಸಭಾಂಗಣ, ಅಗತ್ಯ ಪೀಠೋಪಕರಣಗಳು, ಅಷ್ಟೇ ಅಲ್ಲದೆ ಗಾಂಧಿ ಅಧ್ಯಯನ ಕೇಂದ್ರವಿದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊದರಲ್ಲಿ '**ಗಾಂಧಿ ಸ್ಟಡಿ ಸೆಂಟರ್**' ಎಂಬ ಪರಿಕಲ್ಪನೆಯನ್ನು ರೂಪಿಸಿರುವುದು ಅದ್ಭುತ. ಮಕ್ಕಳಿಗೆ ಗಾಂಧಿ ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಪರಿಚಯಿಸಿಕೊಡುವ ನಿಟ್ಟಿನಲ್ಲಿ ಹಾಗೂ ಸಂವಿಧಾನದ ಮೌಲ್ಯಗಳನ್ನು ಬಿತ್ತುವುದಕ್ಕಾಗಿ ನಿರಂತರ ಪ್ರಯೋಗಗಳನ್ನು ಇಲ್ಲಿ ಮಾಡಲಾಗುತ್ತಿದೆ. ಅಂಬೇಡ್ಕರ್ ಅಧ್ಯಯನ ಕೇಂದ್ರವನ್ನು ತರಬೇಕೆಂಬ ಪ್ರಯತ್ನಗಳು ಆಗುತ್ತಿದೆ.

ಈ ಶಾಲೆಯ ಶಿಕ್ಷಕರ ಶ್ರಮ ಅಪಾರ. ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಕಾಣುವ ಅವರ ಕಾಯಕ ವೃತ್ತಿಗೆ ಮೆಚ್ಚುಗೆ ವ್ಯಕ್ತಪಡಿಸಲೇಬೇಕು. ಮಕ್ಕಳ ಕಲಿಕೆಗೆ ಶಿಕ್ಷಕರ ಕೊರತೆಯಾಗದಂತೆ ಎಸ್.ಡಿ.ಎಂ.ಸಿ ಮುತುವರ್ಜಿ ವಹಿಸಿದೆ. ಶಿಕ್ಷಣ ಇಲಾಖೆಯಿಂದ ನೇಮಿಸಲಾದ 11 ಜನ ಸಿಬ್ಬಂದಿಗಳಿದ್ದಾರೆ, ಇದರ ಜೊತೆಗೆ ಎಸ್.ಡಿ.ಎಂ.ಸಿ ಮೂಲಕ 5 ಜನ ಶಿಕ್ಷಕರನ್ನು ನೇಮಿಸಿ ಬೋಧನಾ ಚಟುವಟಿಕೆಗಳಿಗೆ ಅಡೆತಡೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಈ ಶಾಲೆಯಲ್ಲಿ 42 ಗ್ರಾಮದ ಮಕ್ಕಳು ಶಾಲೆಗೆ ಹಾಜರಾಗುತ್ತಿದ್ದು, ಈ ಶಾಲೆಯ ಪ್ರಭಾರಿ ಮುಖ್ಯಶಿಕ್ಷಕರಾದ ದಕ್ಷಿಣಮೂರ್ತಿರವರ ಹೇಳಿಕೆಯಂತೆ, " ನಮ್ಮ ಶಾಲೆ ಇಡೀ ಗ್ರಾಮಂತರ ಪ್ರದೇಶದಲ್ಲಿ ಉತ್ತಮ ಶಾಲೆಯಾಗಿ ರೂಪಗೊಂಡಿದೆ. ಇದಕ್ಕೆ

ಕಾರಣಕರ್ತರು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಸತೀಶ್ ರವರು. ಇವರು ತಮ್ಮ ಸ್ವಂತ ಪರಿಶ್ರಮದಿಂದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ದೊರಕಬೇಕೆಂಬ ಉದ್ದೇಶದಿಂದ ಶಾಲೆಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಇದರ ಉಪಯೋಗವನ್ನು ಸುತ್ತಮುತ್ತಲಿನ ಪೋಷಕರು ಪಡೆಯುತ್ತಿದ್ದು, ತಮ್ಮ ಸ್ವಇಚ್ಚೆಯಿಂದ ಶಾಲೆಗೆ ಮಕ್ಕಳನ್ನು ದಾಖಲಿಸುತ್ತಿದ್ದಾರೆ. ಪ್ರಾರಂಭದಲ್ಲಿ 37 ಮಕ್ಕಳ ದಾಖಲಾತಿ ಇದ್ದು, ಪ್ರಸ್ತುತ ಶಾಲೆಯ ದಾಖಲಾತಿ 413 ಇದೆ. ಇದು ಹೇಗೆ ಸಾಧ್ಯವಾಯಿತು? ಎಂದರೆ ಈ ಶಾಲೆಯ ಸುಗಮಕಾರರಿಂದ ಚಟುವಟಿಕೆ ಆಧಾರಿತ ಶಿಕ್ಷಣ ನೀಡಲಾಗುತ್ತಿದೆ. ಇದಕ್ಕೆ ಬೇಕಾದ ಸಾಮಗ್ರಿಗಳನ್ನು ಎಸ್. ಡಿ. ಎಂ. ಸಿ ಯ ಅಧ್ಯಕ್ಷರಾದ ಸತೀಶ್ ಸರ್ ಅವರು ಒದಗಿಸುತ್ತಿದ್ದಾರೆ. ಪಿಯು ಕಾಲೇಜಿನಲ್ಲಿರುವಂತಹ. ಉತ್ತಮ ಗುಣಮಟ್ಟದ ಗ್ರಂಥಾಲಯ, ವಿಷಯವಾರು ಕಲಿಕಾ ಕೊಠಡಿಗಳು, ಪ್ರಯೋಗಾಲಯ ಹೀಗೆ ಮಕ್ಕಳ ಆಸಕ್ತಿಗೆ ಅನುಸಾರ ಶಾಲೆಯಲ್ಲಿ ಕಲಿಕೆಯಾಗುತ್ತಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಕಡಬ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ರಾಜ್ಯ ಗ್ರಾಮ ಪಂಚಾಯಿತಿ ಮಹಾಒಕ್ಕೂಟದ ಅಧ್ಯಕ್ಷರಾಗಿರುವ ಶ್ರೀಯುತ ಸತೀಶ್ ರವರ ಪರಿಶ್ರಮವೇ ಈ ಶಾಲೆಯ ಅಭಿವೃದ್ಧಿಗೆ ಕಾರಣ. ಗ್ರಾಮದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ ಶಾಲೆಗೆ ಶ್ರಮಿಸುತ್ತಿದ್ದಾರೆ. ಈ ಶಾಲೆಯ ವಿಶೇಷವೆಂದರೆ ರಾಷ್ಟ್ರಕವಿ ಕುವೆಂಪು ವಿರಚಿತ ನೇಗಿಲಯೋಗಿ ಅಂದರೆ ರೈತ ಗೀತೆಯನ್ನು ಮಧ್ಯಾಹ್ನದ ಬಿಸಿ ಊಟದ ವೇಳೆ ಹಾಡುವ ಮೂಲಕ ಮಕ್ಕಳು ಅನ್ನದಾತನನ್ನು ಸ್ಮರಿಸುವ ಉತ್ತಮ ಶಾಲಾ ಸಂಸ್ಕೃತಿಗೆ ಭದ್ರ ಬುನಾದಿ ನಿರ್ಮಿಸಿದ್ದಾರೆ.

ಅಂದಹಾಗೆ ಪ್ರತಿ ಗ್ರಾಮದಲ್ಲೂ ಇಂತಹ ಸರ್ಕಾರಿ ಶಾಲೆ ಮತ್ತು ಶಿಕ್ಷಕರು ಇದ್ದರೆ ಎಷ್ಟು ಚಂದ ಅಲ್ಲವೇ? ಗ್ರಾಮಸ್ಥರು ಮನಸ್ಸು ಮಾಡಿದರೆ ಶಿಕ್ಷಕರು ಇಚ್ಛಾಶಕ್ತಿ ತೋರಿದರೆ ಯಾವುದು ಕಷ್ಟವಲ್ಲ ಎಂಬುದಕ್ಕೆ ಕಾಡಶೆಟ್ಟಿಹಳ್ಳಿ ಶಾಲೆ ಮಾದರಿಯಾಗಿದೆ.

**ಇಂತಹ ಸುಸಜ್ಜಿತ ಮಾದರಿ ಶಾಲೆಯ ನಿರ್ಮಾಣ ಹೇಗೆ ಮಾಡಬಹುದು?**



ತರಗತಿಗಳಲ್ಲಿ ವಿವಿಧ ವಿಷಯಗಳ ಪಾಠಬೋಧನೆ ವಿಷಯವಾರು ಸಂಪನ್ಮೂಲ ಗಳನ್ನು ಸೃಜಿಸಿಕೊಂಡು ವಿಷಯವಾರು ಲ್ಯಾಬ್ ಗಳಲ್ಲಿ ಮಕ್ಕಳ ಕಲಿಕೆಗೆ ಅನುಕೂಲಿಸಲಾಗುತ್ತಿದೆ.

ಇದೆ ರೀತಿ ಅಭಿವೃದ್ಧಿ ಪಥದಲ್ಲಿ ನಮ್ಮ ಸುತ್ತಮುತ್ತ ಇರುವ ಶಾಲೆಗಳನ್ನು ಪಟ್ಟಿ ಮಾಡೋಣ

https://www.facebook.com/profile.php?id=100057491617512&mibextid=ZbWKwL Kadashettyhalli Success Story

**ಕರ್ನಾಟಕ ಪಬ್ಲಿಕ್ ಶಾಲೆ, ಪ್ರಾಥಮಿಕ ವಿಭಾಗದ ಯಶೋಗಾಥೆ**

ಶತಮಾನ ಕಂಡ ಸರ್ಕಾರಿ ಕನ್ನಡ ಮಾದರಿ ಹಿರಿಯ ಪ್ರಾಥಮಿಕ ಶಾಲೆಯು ನೊಣವಿನಕೆರೆ,ತಿಪಟೂರು ತಾಲ್ಲೂಕು.ತುಮಕೂರು ಜಿಲ್ಲೆ ಈ ಗ್ರಾಮದ ಸುತ್ತಮುತ್ತಲಿನ ಸುಮಾರು 36 ಗ್ರಾಮಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಒದಗಿಸುತ್ತಿದೆ.ಹಲವು ಶಿಕ್ಷಕರ ಶ್ರಮದಿಂದ, ಸಮುದಾಯದ ಸಹಕಾರದಿಂದ ತಾಲೂಕಿನ ಹೆಮ್ಮೆಯ ಶಾಲೆಯಾಗಿ ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 660 ಮಕ್ಕಳು ದಾಖಲಾಗಿ ವಿದ್ಯಾಭ್ಯಾಸ ನಡೆಸುತ್ತಿದ್ದಾರೆ. 2017-18 ನೇ ಸಾಲಿನಲ್ಲಿ ಈ ಶಾಲೆಯು ಸರ್ಕಾರದ ಮಹತ್ವಕಾಂಕ್ಷೆಗಳಲ್ಲಿ ಒಂದಾದ  ಕರ್ನಾಟಕ ಸಾರ್ವಜನಿಕ ಶಾಲೆಗಳು (ಕೆಪಿಎಸ್) ಪಟ್ಟಿಗೆ ಸೇರ್ಪಡೆಗೊಂಡು ಶಾಲೆಯ ಮತ್ತು ವಿದ್ಯಾರ್ಥಿಗಳ ಪ್ರಗತಿಗೆ ಮತ್ತಷ್ಟು ವೇಗ ದೊರೆತಂತಾಯಿತು. ಮೊದಲೇ ಐದು ಮತ್ತು ಆರನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮವು ಶಾಲೆಯಲ್ಲಿ ಪ್ರಾರಂಭವಾಗಿತ್ತು. ಕೆಪಿಎಸ್ ಆದ ನಂತರದಲ್ಲಿ ಪೂರ್ವ ಪ್ರಾಥಮಿಕದಿಂದಲೂ ಆಂಗ್ಲ ಮಾಧ್ಯಮವು ಪ್ರಾರಂಭವಾಗಿ ಪ್ರಸ್ತುತ ವರ್ಷದಲ್ಲಿ ಎಲ್ಲಾ ತರಗತಿಗಳಲ್ಲಿಯೂ ಆಂಗ್ಲ ಮಾಧ್ಯಮ ಮತ್ತು ಕನ್ನಡ ಮಾಧ್ಯಮ ವಿಭಾಗಗಳು ನಡೆಯುತ್ತಿವೆ ಶಾಲೆಯು ಇಲಾಖೆಯ ಎಲ್ಲ ಕಾರ್ಯಕ್ರಮಗಳನ್ನು ನಿರ್ವಹಿಸುವುದರ ಜೊತೆಗೆ ಇನ್ನಿತರ ನಾವೀನ್ಯಯುತ ಚಟುವಟಿಕೆಗಳನ್ನು ನಡೆಸುತ್ತಿದೆ. ಪ್ರಾರ್ಥನಾ ಅವಧಿಯನ್ನು ಕಲಿಕಾ ಅವಧಿಯನ್ನಾಗಿ ಪರಿಣಾಮಕಾರಿಯಾಗಿ ರೂಪಿಸಲಾಗಿದೆ. ಪ್ರಾರ್ಥನಾ ಅವಧಿಯಲ್ಲಿ ನಿತ್ಯ ಪಂಚಾಂಗ, ಕನ್ನಡ ಇಂಗ್ಲಿಷ್ ದಿನಪತ್ರಿಕೆ ವಾಚನ, ಕವನ ವಾಚನ, ಗಾದೆ ಮಾತುಗಳು, ಒಗಟುಗಳು, ಇಂಗ್ಲಿಷ್ ಕಲಿಯೋಣ, ಇಂಗ್ಲಿಷ್ ಕಾನ್ವರ್ಸೇಶನ್ ವಿನ್ನರ್ಸ್ ಆಫ್ ದ ಡೇ, ವಿನ್ನರ್ಸ್ ಆಫ್ ದ ಫಾಸ್ಟೆಸ್ಟ್ ಲರ್ನರ್, ಮನೆಮದ್ದು, ಆರೋಗ್ಯ, ವಚನಗಳು ಹೀಗೆ ಇನ್ನು ಮುಂತಾದ ಹಲವು ಚಟುವಟಿಕೆಗಳಿಂದ ಪ್ರಾರ್ಥನಾ ಅವಧಿಯನ್ನು ಕಲಿಕಾ ಅವಧಿಯನ್ನಾಗಿ ರೂಪಿಸಲಾಗಿದೆ. ಇದರಿಂದ ಮಕ್ಕಳ ಪ್ರತಿಭೆಗೆ ವೇದಿಕೆ ದೊರೆಯುತ್ತಿರುವುದಲ್ಲದೇ, ವೇದಿಕೆಯ ಭಯ, ಸಭಾ ಕಂಪನವನ್ನು ದೂರವಾಗಿಸಿ, ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವನ್ನು ಕಲಿಸಲಾಗುತ್ತಿದೆ. ವಿವಿಧ ಸಂಘಗಳಡಿಯಲ್ಲಿ ಹಲವು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ.

ಸಾರ್ವಜನಿಕ ಶಾಲೆಗಳು ಗುಣಾತ್ಮಕ ಶಿಕ್ಷಣದತ್ತ ಹೆಜ್ಜೆಹಾಕುವಂತೆ ಮಾಡುವಲ್ಲಿ ನಮ್ಮ ಪ್ರಯತ್ನಗಳೇನು? ಚರ್ಚಿಸಿ.



**EMTIP ಶಾಲೆಗಳ ಯಶೋಗಾಥೆ**

ಸರ್ಕಾರಿ ಉರ್ದು ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ ನಜರಾಬಾದ್, ತುಮಕೂರು ಶಾಲೆಯಲ್ಲಿ 2019 20ನೇ ಸಾಲಿನಿಂದ ಒಂದರಿಂದ ಏಳನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಬೋಧನಾ ವಿಧಾನವನ್ನು ಅಳವಡಿಸಿಕೊಂಡು ತರಗತಿಗಳನ್ನು ಪ್ರಾರಂಭಿಸಲಾಗಿದೆ. 2019-20ನೇ ಸಾಲಿನಲ್ಲಿ ಒಂದನೇ ತರಗತಿಗೆ ಪ್ರಾರಂಭಿಕವಾಗಿ ತರಗತಿಗಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಪ್ರಾರಂಭಿಸಲಾಯಿತು. ಈ ಹಿನ್ನಲೆಯಲ್ಲಿ ಶಾಲೆಯ ದಾಖಲಾತಿ ಗಣನೀಯವಾಗಿ ಹೆಚ್ಚಾಯಿತು. ಶಾಲೆಯ ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಯನ್ನು ಅತ್ಯಂತ ಸಂತೋಷದಾಯಕವಾಗಿ ಕಲಿಯುತ್ತಿದ್ದಾರೆ. ಮಕ್ಕಳು ಆಸಕ್ತಿಯಿಂದ ಪ್ರತಿದಿನ ಶಾಲೆಗೆ ಹಾಜರಾಗುತ್ತಿದ್ದಾರೆ. ದ್ವಿಭಾಷಾ ಮಾಧ್ಯಮ ಬೋಧನೆಯಿಂದಾಗಿ ಮಕ್ಕಳು ಇಂಗ್ಲಿಷ್ ಭಾಷೆಯನ್ನು ಸುಲಲಿತವಾಗಿ ಮಾತನಾಡುವ, ಬರೆಯುವಕೌಶಲ್ಯವನ್ನು ಪರಿಣಾಮಕಾರಿಯಾಗಿ ಕಲಿತಿದ್ದಾರೆ. ಒಂದನೇ ತರಗತಿಯಿಂದ

ಐದನೇ ತರಗತಿವರೆಗೆ ಮಕ್ಕಳು ದ್ವಿಭಾಷೆಯಲ್ಲಿ ಕಲಿಯುತ್ತಿದ್ದು, ಮಕ್ಕಳ ಕಲಿಕೆ ಉತ್ತಮವಾಗಿದೆ. ಶಿಕ್ಷಕರಿಗೂ ಹೆಚ್ಚು ಹೊರೆಯಾಗದೆ ಶಿಕ್ಷಕರು ಚಟುವಟಿಕೆಯಿದ ಸಂತಸದಾಯಕವಾದಕಲಿಕೆಯನ್ನು ಉಂಟು ಮಾಡಲು ಹೆಚ್ಚು ಸಹಕಾರಿಯಾಗಿದೆ.

**ಪೋಷಕರ ನಿರೀಕ್ಷೆಯಂತೆ ಆಂಗ್ಲಮಾಧ್ಯಮದ ಮೂಲಕ ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸಬಹುದೇ?**

**ಚಿಂತಿಸಿ**




**ಶಿಕ್ಷಕರ ಸಹಭಾಗಿತ್ವದಲ್ಲಿ ಶಾಲೆಯ ಯಶೋಗಾಥೆ**

ಇವರ ಹೆಸರು ನಾಗರಾಜು ಕೆ.ಸಿ ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಡಿಕೆಹಳ್ಳಿ, ಕುಣಿಗಲ್ (ತಾ) ತುಮಕೂರು ಜಿಲ್ಲೆಯ ಶಿಕ್ಷಕರು. ಇವರು ಶಿಕ್ಷಕರ ವೃತ್ತಿಗೆ ಪ್ರೀತಿಯಿಂದ ಬಯಸಿ ಬಂದವರು. ಮಕ್ಕಳನ್ನು ಶೈಕ್ಷಣಿಕವಾಗಿ ಮುನ್ನಡೆಸಲು ನಿರಂತರವಾಗಿ ಪ್ರಯತ್ನಗಳನ್ನು ಮಾಡುತ್ತಾ ಬಂದಿದ್ದಾರೆ. ಶಿಕ್ಷಕರು ಅವರ ಮಾತಲ್ಲೇ ಹೇಳಿದ್ದಾರೆ ಕೇಳೋಣ ಬನ್ನಿ. “ಈ ಶಾಲೆಗೆ ಬಂದ ನಂತರ ಪ್ರಭಾರ ಮುಖ್ಯಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ಸಿಕ್ಕಾಗ, ನನ್ನ ಕನಸಿನ ಯೋಜನೆಗಳನ್ನು ಒಂದೊಂದಾಗಿ ಅನುಷ್ಠಾನಗೊಳಿಸುತ್ತಾ ಬಂದೆ. ನನ್ನ ಕಾರ್ಯವೈಖರಿಯನ್ನು ಹಾಗೂ ಉದ್ದೇಶಗಳನ್ನು ಪೋಷಕರು, ಹಳೆ ವಿದ್ಯಾರ್ಥಿಗಳು, ಮುಖಂಡರು ಅರ್ಥಮಾಡಿಕೊಂಡು ನನ್ನ ನೆರವಿಗೆ ಬಂದರು. ಮೊದಲನೆಯದಾಗಿ ಶಾಲೆಯನ್ನು ಆಕರ್ಷಕವಾಗಿಸಲು ಕರೋನ ಸಂದರ್ಭದಲ್ಲಿ ಕೈತೋಟವನ್ನು ಮಾಡಿದೆ. ನಂತರ ಹಳೆ ವಿದ್ಯಾರ್ಥಿಯಾದ ಶ್ರೀ ಕಿರಣ್ ಕುಮಾರ್ ಅವರು 2 ಕಂಪ್ಯೂಟರ್ ಗಳನ್ನು, ಅವರ ಸಂಗಡಿಗರು ಅದಕ್ಕೆ ಬೇಕಾದ ಪೀಠೋಪಕರಣಗಳನ್ನು ಒದಗಿಸಿಕೊಟ್ಟರು. ಶಾಲಾನುದಾನ ಮತ್ತು ನನ್ನ ಸ್ವಂತ ಹಣದಿಂದ ನವೀನ ರೀತಿಯ ಸ್ಮಾರ್ಟ್ ತರಗತಿ ನಿರ್ವಹಿಸಿ ನಾಲ್ಕನೇ

ತರಗತಿಯಿಂದ ಮಕ್ಕಳಿಗೆ ಬುನಾದಿ ಕಂಪ್ಯೂಟರ್ ಜ್ಞಾನ ಅನುಕೂಲಿಸಲಾಗುತ್ತಿದೆ. ಮುಂದುವರೆದು ಅದೇ ತರಗತಿಗೆ 32,000 ಬೆಲೆಯ ಸ್ಮಾರ್ಟ್ ಟಿವಿ ಸಮುದಾಯದವರಿಂದ ಪಡೆದು ಅದಕ್ಕೆ ಡಿಜಿಟಲ್ ರೀಸಿವರ್ ಸಹ ಅಳವಡಿಸಿದೆ. ಶಾಲೆಯ ಕೈತೋಟದಲ್ಲಿ ಸೊಪ್ಪು ತರಕಾರಿಗಳನ್ನು ಬೆಳೆದು ತಾಜಾ ಪೌಷ್ಟಿಕಯುಕ್ತ ಸಾವಯವ ತರಕಾರಿ ಬೆಳೆದು ಬಳಸಲಾಗುತ್ತಿದೆ. ಮತ್ತು ಪರಿಸರ ಪಾಠಕ್ಕೆ ಶಾಲಾ ಕೈತೋಟ ಬಳಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಪೋಷಕರಲ್ಲಿ ಇಂಗ್ಲೀಷ್ ವ್ಯಾಮೋಹ ಹೆಚ್ಚಾಗುತ್ತಿರುವುದನ್ನು ಅರ್ಥಮಾಡಿಕೊಂಡು ಪೋಷಕರು ಬಯಸಿದ್ದನ್ನೇ ಕೊಡುವ ನಿಟ್ಟಿನಲ್ಲಿ ಇಂಗ್ಲೀಷ್ ಕಲಿಕೆಗೆ ವಿಶೇಷ ಆದ್ಯತೆ ನೀಡಿ ಆಸಕ್ತಿಯೊಂದಿಗೆ ಕಲಿಸುತ್ತಾ ಶಾಲೆಯಲ್ಲಿ ಇಂಗ್ಲೀಷ್ ಕಲಿಕಾ ವಾತಾವರಣ ಸೃಷ್ಟಿಸಲಾಗಿದೆ. ಅದರಲ್ಲಿ ಸಫಲತೆಯನ್ನು ಸಹ ಕಾಣಲಾಗಿದೆ. ಶಾಲೆಯಲ್ಲಿ ಪ್ರತಿ ಮಗುವಿನ ಅಭಿಪ್ರಾಯ ಗೌರವಿಸುವುದನ್ನು ರೂಢಿಸಿಕೊಂಡಿದ್ದೇನೆ. ಕಲಿಕೆಗೆ ಸ್ವಾತಂತ್ರ್ಯ ನೀಡಲಾಗಿದೆ ಮಗುವಿನ ಚಲನ ವಲಗಳನ್ನು ಗಮನಿಸಿ ಮಕ್ಕಳನ್ನು ಹಂತ ಹಂತವಾಗಿ ತಿದ್ದಲಾಗುತ್ತಿದೆ. ಪ್ರತಿ ಮಗು ನಮ್ಮ ಮನೆಯ ಸದಸ್ಯ ಹಾಗೂ ಆ ಮಗುವಿಗೆ ಶಿಕ್ಷಕರು ಉತ್ತಮ ಗೆಳೆಯರು ಎಂಬ ಭಾವನೆ ಮೂಡಿಸಿ ನಿರಂತರವಾಗಿ ಶೈಕ್ಷಣಿಕ ಚಟುವಟಿಕೆಯಲ್ಲಿ ಮಕ್ಕಳನ್ನು

ತೊಡಗಿಸಲಾಗುತ್ತಿದೆ" ಎಂದು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ಇವರು ಶಾಲಾ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮ ಪಡಿಸುವಲ್ಲಿ ಉತ್ತಮ ಕಾರ್ಯಪ್ರವೃತಿಯನ್ನು ಗುರುತಿಸಿ ನಮ್ಮ ಜಿಲ್ಲೆಯಿಂದ ನೀಡುವ ಜಿಲ್ಲೆಯ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುತ್ತಾರೆ

**ಶಿಕ್ಷಕರ ಮನದಾಳದ ಮಾತಿನಿಂದ ಗ್ರಹಿಸಿದ ಅಂಶಗಳೇನು? ಪಡೆದ ಒಳನೋಟಗಳೇನು?**



**ಶಾಲಾ ಶಿಕ್ಷಣದ ಭಾಗೀದಾರರಲ್ಲಿ ಒಬ್ಬರಾಗಿ ಶಿಕ್ಷಕರು ತಮ್ಮ ಕನಸಿನ ಶಾಲೆ ಕಟ್ಟುವಲ್ಲಿ ಹೇಗೆ ಯಶಸ್ವಿಯಾಗಿದ್ದಾರೆ?**

ಹಾಗಾದರೆ ಮೇಲಿನ ಎಲ್ಲ ಯಶೋಗಾಥೆಗಳನ್ನು ಅರ್ಥೈಸಿಕೊಂಡ ಮೇಲೆ ನನ್ನ ಸಂಸ್ಥೆ ನನ್ನ ಯೋಜನೆ ಇದರಲ್ಲಿ ನಾನು ವಿವಿಧ ಬಾಗಿದಾರರನ್ನು ಹೇಗೆ ಹೊಂದಿಸಿಕೊಳ್ಳುವೆ ಎಂದು ಮುಂದಿನ ಅಧ್ಯಯನದಲ್ಲಿ ತಿಳಿಯೋಣ.

**ನನ್ನ ಸಂಸ್ಥೆ - ನನ್ನ ಯೋಜನೆ- ಇದರಲ್ಲಿ ನಾನು ವಿವಿಧ ಭಾಗೀದಾರರನ್ನು ಹೇಗೆ ಹೊಂದಿಸಿಕೊಳ್ಳುವೆ**

**ನಿರೀಕ್ಷಿತ ಕಲಿಕಾ ಫಲಗಳು :-**


**1.**ಸಂಸ್ಥಾ ಯೋಜನೆಯಲ್ಲಿ ವಿವಿಧ ಭಾಗಿದಾರರನ್ನು ತೊಡಗಿಸಿಕೊಳ್ಳುವ ಬಗೆಯನ್ನು ತಿಳಿಯುವರು.

ಗುಣಮಟ್ಟದ ಶಿಕ್ಷಣಕ್ಕಾಗಿ ವಿವಿಧ ಭಾಗೀದಾರರು ಯಾರು ಮತ್ತು ಅವರ ಪಾತ್ರ ಹೊಣೆಗಾರಿಕೆಗಳೇನು ಎಂಬುದನ್ನು ಈಗಾಗಲೇ ಚರ್ಚಿಸಿದೆ. ಅದರಂತೆ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲೆಯೇ ಕೇಂದ್ರ ಬಿಂದು. ಶಾಲೆ ತನ್ನ ಕಾರ್ಯಗಳಲ್ಲಿ ಸಫಲವಾಗುವುದು ನಿರ್ದಿಷ್ಟ ಗುರಿ, ದೃಷ್ಟಿಕೋನ ಆಧಾರಿತ ಕ್ರಿಯಾಯೋಜನೆಯಿಂದ. ಅದರಂತೆ ಭಾಗೀದಾರರನ್ನು ತೊಡಗಿಸಿಕೊಂಡು ಹೇಗೆ ಸಂಸ್ಥಾ ಯೋಜನೆ ಸಿದ್ಧಪಡಿಸಬೇಕು ಎಂಬುದನ್ನು ಈಗ ಚರ್ಚಿಸೋಣ.

**ಸಂಸ್ಥಾ ಯೋಜನೆ**

ಪ್ರೊಫೆಸರ್ ಎಂ.ಬಿ. ಬುಜ್ ಅವರ ಹೇಳಿಕೆಯಂತೆ -"ಶಾಲಾ ಅಥವಾ ಸಂಸ್ಥಾ ಯೋಜನೆ ಎಂದರೆ ಶಿಕ್ಷಣ ಸಂಸ್ಥೆಯ ಅಗತ್ಯಕ್ಕೆ ಅನುಗುಣವಾಗಿ ಅಭಿವೃದ್ಧಿ ಪರ ಕಾರ್ಯಯೋಜನೆಯನ್ನು ಸಿದ್ದಪಡಿಸಬೇಕು. ಅದರಲ್ಲಿ ಸಂಸ್ಥೆಗೆ ದೊರಕುವ ಸಂಪನ್ಮೂಲಗಳ ನಿರ್ವಹಣೆ ಮತ್ತು ಶಾಲಾ ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸುವ ಹಾಗೂ ಅನುಷ್ಠಾನಕ್ಕೆ ತರುವ ಅವಕಾಶಗಳನ್ನು ಕಲ್ಪಿಸಿರಬೇಕು. ಇಂತಹ ಯೋಜನೆಗಳು ದೀರ್ಘಕಾಲಾವಧಿಯ ಅಥವಾ ಅಲ್ಪಕಾಲಾವಧಿಯ ಯೋಜನೆಗಳಾಗಿರಬಹುದು. ಆದರೆ ಯಾವುದೇ ಯೋಜನೆಯು ಸಮುದಾಯದಿಂದ ಮತ್ತು ಶಾಲೆಯಲ್ಲಿ ದೊರಕುವ ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವ ತತ್ವದ ಆಧಾರದ ಮೇಲೆ ಸಿದ್ಧಪಡಿಸಬೇಕು".

**ಸಂಸ್ಥಾ ಯೋಜನೆ ಪ್ರಕ್ರಿಯೆ:**




1. ಗುರಿ ನಿರ್ಧರಿಸುವುದು.
2. ಅವಶ್ಯಕತೆಗಳನ್ನು ಗುರುತಿಸುವುದು.
3. ಕಾರ್ಯಗತಗೊಳಿಸಲು ಯೋಜನೆಯನ್ನು ಸಿದ್ಧಪಡಿಸುವುದು
4. ಮೇಲುಸ್ತುವಾರಿ ಮತ್ತು ಮೌಲ್ಯಮಾಪನ
5. ಹಿಮ್ಮಾಹಿತಿ ಮತ್ತು ಸುಧಾರಣೆ

**ಸಂಸ್ಥಾ ಯೋಜನೆಯ ಅವಶ್ಯಕತೆ ಮತ್ತು ಅಗತ್ಯತೆಯನ್ನು ಚರ್ಚಿಸಿ.**

**ಸಂಸ್ಥಾ ಯೋಜನೆಯಲ್ಲಿ ಭಾಗೀದಾರರ ಪಾತ್ರ.:**

ಭಾಗೀದಾರರು ಶೈಕ್ಷಣಿಕ ಯೋಜನೆಯನ್ನು ತಯಾರಿಸುವಲ್ಲಿ ಕಾರ್ಯಗತಗೊಳಿಸುವಲ್ಲಿ ಮತ್ತು ಮೌಲ್ಯಮಾಪನ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಶೈಕ್ಷಣಿಕ ಯೋಜನೆಯ ಮೂರು ಪ್ರಮುಖ ಕ್ಷೇತ್ರಗಳಾದ ದಾಖಲಾತಿ, ಗುಣಮಟ್ಟ ಮತ್ತು ಆಡಳಿತವನ್ನು ಉತ್ತಮಗೊಳಿಸುವಲ್ಲಿ ಯೋಜನೆ ತಯಾರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ.

"ನನ್ನ ಸಂಸ್ಥೆ ನನ್ನ ಯೋಜನೆ" ಇದರಲ್ಲಿ ನಾನು ವಿವಿಧ ಭಾಗೀದಾರರನ್ನು ಹೇಗೆ ಹೊಂದಿಸಿಕೊಳ್ಳುವೆ.

**1. ನಮ್ಮ ಭಾಗೀದಾರರನ್ನು ಗುರುತಿಸಿಕೊಳ್ಳುವುದು**

ಶಾಲಾ ಶೈಕ್ಷಣಿಕ ಭಾಗೀದಾರರನ್ನು ಗುರುತಿಸಿಕೊಂಡು ಅವರ ಪಾತ್ರ, ಆಸಕ್ತಿ ಮತ್ತು ನಿರೀಕ್ಷೆಗಳನ್ನು ತಿಳಿದುಕೊಳ್ಳುವುದು. ಅವರ ಅಗತ್ಯತೆ, ಕಾಳಜಿ ಮತ್ತು ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳುವುದು. ಸಮುದಾಯದ ಸದಸ್ಯರಾದ ಕುಶಲಕರ್ಮಿಗಳು( ಗೊಂಬೆ ತಯಾರಿಕೆ, ಬುಟ್ಟಿ ತಯಾರಿಕೆ ,ಕಮ್ಮಾರಿಕೆ, ಶಿಲ್ಪಕಲೆ , ಕೃಷಿ, ಜೇನು ಸಾಕಾಣಿಕೆ, ಹೊಲಿಗೆ ಇತರೆ) ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಪಟ್ಟಿ ಮಾಡಿಕೊಂಡು ಅವರ ಆಸಕ್ತಿ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳುವುದು.

ನಮ್ಮ ಶಾಲಾ ಸಮುದಾಯದಲ್ಲಿ ಶೈಕ್ಷಣಿಕ ಯೋಜನೆಯ ಭಾಗೀದಾರರನ್ನು ಗುರುತಿಸಿಕೊಂಡು ಪಟ್ಟಿ ಮಾಡೋಣ

**2. ನಮ್ಮ ಕಾಣ್ಕೆ ಮತ್ತು ಗುರಿಯನ್ನು ತಿಳಿಸುವುದು**

ಸಂಸ್ಥಾ ಯೋಜನೆಯಲ್ಲಿ ನಮ್ಮ ಕಾಣ್ಕೆ ಮತ್ತು ಗುರಿಗಳನ್ನು ನಮ್ಮ ಭಾಗೀದಾರರಲ್ಲಿ ತಿಳಿಸಿ ಅವರಿಂದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ಪಡೆಯೋಣ (ಹಿಮ್ಮಾಹಿತಿ ಮತ್ತು inputs).

ಮಾಹಿತಿ ಮತ್ತು ಸಲಹೆಗಳನ್ನು ನಮೂನೆಗಳನ್ನು ಸಿದ್ಧಪಡಿಸಿಕೊಂಡು ವೆಬ್ಸೈಟ್ಗಳ ಮೂಲಕ ಸಾಮಾಜಿಕ ಮಾಧ್ಯಮ (ಸೋಶಿಯಲ್ ಮೀಡಿಯಾ), ಸಭೆಗಳಲ್ಲಿ ಮತ್ತು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ಪಡೆಯೋಣ.

- ಉತ್ತಮ ಸಂವಹನದೊಂದಿಗೆ ವಿವರಣೆಯನ್ನು ಸ್ಪಷ್ಟವಾಗಿ ಸಮಂಜಸವಾಗಿರುವಂತೆ ನೀಡೋಣ.
- ಯೋಜನೆಯಲ್ಲಿ ಮಕ್ಕಳಿಗೆ ಮತ್ತು ಶಾಲೆಗೆ ಆಗುವ ಉಪಯೋಗಕ್ಕೆ ಒತ್ತು ನೀಡೋಣ.
- ನಮ್ಮ ಸಾಂಸ್ಥಿಕ ಯೋಜನೆಗೆ ತಾರ್ಕಿಕ ವಿವರಣೆ ಮತ್ತು ಆಧಾರ ನೀಡೋಣ.
- ನಮ್ಮ ಜಿಲ್ಲೆ ಮತ್ತು ರಾಜ್ಯದ ಮಾನದಂಡ ಮತ್ತು ನೀತಿಗಳಿಗೆ ಜೋಡಿಸಿ ಕೊಳ್ಳೋಣ.
- ಭಾಗೀದಾರರ ಅಭಿಪ್ರಾಯ ಮತ್ತು ಸಲಹೆಗಳಿಗೆ ಮನ್ನಣೆ ನೀಡೋಣ.
- ಭಾಗೀದಾರರ ಕೊಡುಗೆ ಮತ್ತು ಕಾಳಜಿಯನ್ನು ಅಂಗೀಕರಿಸೋಣ.

ನಮ್ಮ ಸಂಸ್ಥೆಯ ಕಾಣ್ಕೆ ಮತ್ತು ಗುರಿಯನ್ನು ಬರೆಯೋಣ.

**3. ನಿರ್ಣಯ ತೆಗೆದುಕೊಳ್ಳುವ ಮತ್ತು ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವುದು**

- ಭಾಗೀದಾರರಿಗೆ ನಿರ್ಣಯ ತೆಗೆದುಕೊಳ್ಳುವಲ್ಲಿ ಮತ್ತು ಸ್ವಾಮ್ಯತೆ (ownership) ಹೊಂದುವಲ್ಲಿ ಸಬಲರನ್ನಾಗಿಸೋಣ. ಇದನ್ನು ಕಮಿಟಿ ತಂಡ ಟಾಸ್ಕ್ ಫೋರ್ಸ್ ಗಳನ್ನು ರಚಿಸಿ ಭಾಗೀದಾರರಿಗೆ ಸಹಯೋಗ ಮತ್ತು ಭಾಗವಹಿಸುವಿಕೆಗೆ ಅವಕಾಶ ನೀಡಬಹುದಾಗಿದೆ.
- ಭಾಗೀದಾರರಿಗೆ ಪಾತ್ರ ಜವಾಬ್ದಾರಿಗಳನ್ನು ವಹಿಸಿ ಅಗತ್ಯ ತರಬೇತಿ ಮತ್ತು ಬೆಂಬಲ ನೀಡೋಣ ಮತ್ತು ಸಂಪನ್ಮೂಲಗಳನ್ನು ಒದಗಿಸಿ ತಮ್ಮ ಕಾರ್ಯಗಳನ್ನು ನಿರ್ವಹಿಸಲು ಸಹಕರಿಸೋಣ.
- ಸ್ಪಷ್ಟ ಮತ್ತು ವಾಸ್ತವಿಕ ನಿರೀಕ್ಷೆಗಳನ್ನು ಮತ್ತು ಸಮಯೋಚಿತತೆಯನ್ನು ಸಾಂಸ್ಥಿಕ ಯೋಜನೆಯಲ್ಲಿ ಸ್ಥಾಪಿಸೋಣ.
- ಪ್ರಗತಿ ಮತ್ತು ಪರಿಣಾಮಗಳನ್ನು ನಿಗದಿತವಾಗಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡೋಣ.

ಶಾಲಾ ಕಾರ್ಯಕ್ರಮಗಳಲ್ಲಿ ಅತಿಥಿಗಳಾಗಿ ಆಹ್ವಾನಿಸಿ, ಪೋಷಕರ ಸಭೆಗೆ ಆಹ್ವಾನಿಸಿ ಪಠ್ಯ, ಸಹಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಹೊಂದಿಸಿಕೊಂಡು ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದಾಗಿದೆ.

**ಭಾಗೀದಾರರಿಗೆ ಜವಾಬ್ದಾರಿ ವಹಿಸಿ ತರಬೇತಿ ಬೆಂಬಲ ನೀಡುವುದರ ಕುರಿತು ಚರ್ಚಿಸಿ.**

**4. ಯಶಸ್ಸು ಮತ್ತು ಸವಾಲುಗಳನ್ನು ಆಚರಿಸುವುದು. :**

- ಅಂತಿಮವಾಗಿ ಯಶಸ್ಸು ಮತ್ತು ಸವಾಲುಗಳನ್ನು ಭಾಗೀದಾರರೊಂದಿಗೆ ಆಚರಿಸೋಣ. ಭಾಗೀದಾರರ ಪ್ರಯತ್ನ ಮತ್ತು ಸಾಧನೆಯನ್ನು ಗುರುತಿಸಿ ಪ್ರಶಂಶಿಸೋಣ
- ಸಾಂಸ್ಥಿಕ ಯೋಜನೆಯ ಫಲಿತಾಂಶ ಯಶೋಗಾಥೆಗಳನ್ನು ವರದಿಗಳ ಮೂಲಕ ದತ್ತಾಂಶಗಳ ಮೂಲಕ ಪ್ರಶಸ್ತಿ ಪ್ರಶಂಸಾ ಪತ್ರಗಳ ಮೂಲಕ ಹಂಚಿಕೊಳ್ಳೋಣ.
- ಭಾಗೀದಾರರಿಗೆ ಹಿಮ್ಮಾಹಿತಿ ನೀಡೋಣ ಮತ್ತು ಪಡೆಯೋಣ. ಸಾಮರ್ಥ್ಯವನ್ನು ಪ್ರಶಂಸಿಸೋಣ. ಉತ್ತಮ ಪಡಿಸಿಕೊಳ್ಳಬಹುದಾದ ಅಂಶಗಳನ್ನು ತಿಳಿಸೋಣ.
- ಸಾಂಸ್ಥಿಕ ಯೋಜನೆಯಲ್ಲಿ ಕಲಿತ ಪಾಠಗಳು ಮತ್ತು ಸವಾಲುಗಳನ್ನು ಸ್ವ-ಅವಲೋಕನ ಮಾಡಿಕೊಳ್ಳೋಣ.
- ಮುಂದಿನ ಯೋಜನೆಗೆ ಉತ್ತಮಪಡಿಸಿಕೊಳ್ಳಬಹುದಾದ ಕ್ಷೇತ್ರಗಳನ್ನು ಗುರುತಿಸಿಕೊಳ್ಳೋಣ.
- ಶಾಲಾ ವಾರ್ಷಿಕೋತ್ಸವ, ಬಹುಮಾನ ವಿತರಣೆ, ಕ್ರೀಡಾ ಸಾಮಗ್ರಿ ವಿತರಣೆ ಇತರೆ ಕಾರ್ಯಕ್ರಮಗಳಲ್ಲಿ ಅನುಷ್ಠಾನಗೊಳಿಸೋಣ.

**ಯಶಸ್ಸು ಮತ್ತು ಸವಾಲುಗಳನ್ನು ಭಾಗಿದಾರರೊಂದಿಗೆ ಆಚರಿಸುವುದರಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಚರ್ಚಿಸಿ.**

**ಈ ಕೆಳಗಿನ ಸನ್ನಿವೇಶಗಳಿಗೆ ಕಾರ್ಯತಂತ್ರ ರಚಿಸೋಣ**

1. ಭೌತಿಕ ಸೌಲಭ್ಯಗಳಾದ ಶೌಚಾಲಯ, ಕೊಠಡಿ ನಿರ್ಮಾಣ/ದುರಸ್ತಿ ಕಾರ್ಯಗಳಲ್ಲಿ ದಾನಿಗಳನ್ನು ಪಂಚಾಯಿತಿಯನ್ನು, ಎನ್ ಜಿಓಗಳನ್ನು ಹೊಂದಿಸಿಕೊಳ್ಳುವ ಕುರಿತು ಕಾರ್ಯ ತಂತ್ರ ರಚಿಸೋಣ.

2. ಕ್ಲಬ್ ಚಟುವಟಿಕೆಗಳ ನಿರ್ವಹಣೆಯಲ್ಲಿ( ಆರೋಗ್ಯ ಇಕೋ ಕ್ಲಬ್, ಭಾಷಾ ಕ್ಲಬ್. ವೃತ್ತಿ ಮಾರ್ಗದರ್ಶನ, ಕಾರ್ಯಾನುಭವ ಇತರೆ) ಸಮುದಾಯದ ಸಹಭಾಗಿತ್ವವನ್ನು ಎಂದರೆ ವೈದ್ಯರೊಂದಿಗೆ ಪರಿಸರವಾದಿಗಳೊಂದಿಗೆ ಕವಿಗಳು, ಲೇಖಕರು, ಕುಂಬಾರಿಕೆ ಮಾಡುವವರು, ರೈತರು, ಶಿಲ್ಪಕಲೆ, ಜೇನು ಸಾಕಾಣಿಕೆ ಇತರೆ ಕುಶಲಕರ್ಮಿಗಳೊಂದಿಗೆ ಶಿಕ್ಷಕರನ್ನು ಸಂಯೋಜಿಸಿಕೊಂಡು ಕ್ಷೇತ್ರ ಭೇಟಿಯಂತಹ ಕಾರ್ಯಕ್ರಮಗಳನ್ನು ನಿರ್ವಹಿಸುವ ಕಾರ್ಯಯೋಜನೆ ರೂಪಿಸಿಕೊಳ್ಳೋಣ

3. ಐಸಿಟಿ /ಕಲಿಕಾ ಉಪಕರಣಗಳನ್ನು ಒದಗಿಸಲು ಹಳೆಯ ವಿದ್ಯಾರ್ಥಿಗಳನ್ನು ಅಥವಾ ದಾನಿಗಳನ್ನು ಅಥವಾ ಎನ್‌ಜಿಓಗಳನ್ನು ಹೊಂದಿಸಿಕೊಳ್ಳಲು ಕಾರ್ಯತಂತ್ರ ರೂಪಿಸಿಕೊಳ್ಳೋಣ.

4. ಕ್ರೀಡೆಗಳಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿವಿಧ ಪರೀಕ್ಷೆಗಳಿಗೆ ಮಕ್ಕಳಿಗೆ ತರಬೇತಿ ನೀಡುವಲ್ಲಿ ಸಮುದಾಯದ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಹೊಂದಿಸಿಕೊಳ್ಳಲು ಕಾರ್ಯತಂತ್ರ ರೂಪಿಸೋಣ.

5. ಗುಣಮಟ್ಟದ ಕಲಿಕೆಗಾಗಿ( ವಿಜ್ಞಾನ /ಗಣಿತ ಕಿಟ್ ಗಳು /ಲ್ಯಾಬ್ ಗಳ ಸೃಜನೆಗೆ ಗ್ರಂಥಾಲಯಗಳ ಸೃಜನೆಗೆ ಸಂಬಂಧಿಸಿದಂತೆ, ಎನ್‌ಜಿಓಗಳ ಸಹಭಾಗಿತ್ವ ಮತ್ತು ಶಿಕ್ಷಕರೊಂದಿಗೆ ಸಂಯೋಜನೆಗೊಳಿಸುವ ಕಾರ್ಯತಂತ್ರ ರೂಪಿಸೋಣ( ಗ್ರಂಥಾಲಯಕ್ಕೆ ಹುಟ್ಟು ಹಬ್ಬದ ಸಂದರ್ಭದಲ್ಲಿ ಮಕ್ಕಳಿಂದ / ಪೋಷಕರಿಂದ ಪುಸ್ತಕ ನೀಡುವಿಕೆ /ಉಪಕರಣಗಳನ್ನು ನೀಡುವಿಕೆ ಇತರೆ )

6. ವಿವಿಧ ಪರೀಕ್ಷೆಗಳಿಗೆ (NTSE, NMMS ,ನವೋದಯ ಇತರೆ) ಸಿದ್ದಪಡಿಸುವ ನಿಟ್ಟಿನಲ್ಲಿ ಸಮುದಾಯದ ಸದಸ್ಯರಾದ ಬ್ಯಾಂಕ್ ಅಧಿಕಾರಿಗಳು, ಎನ್.ಜಿ.ಓ ಗಳು ಇತರೆ ಅಧಿಕಾರಿಗಳು, ಇತರೆ ಸ್ಪರ್ಧಾತ್ಮಕ ಪರೀಕೆಗಳ ಮೂಲಕ ವಿವಿಧ ಹುದ್ದೆಗೆ ಆಯ್ಕೆಯಾಗಿರುವ ಸ್ಥಳೀಯರನ್ನು ಹೊಂದಿಸಿಕೊಂಡು ಮಕ್ಕಳಿಗೆ ತರಬೇತಿ ನೀಡಲು ಕಾರ್ಯತಂತ್ರ ರೂಪಿಸಿಕೊಳ್ಳೊಣ.

ಹೀಗೆ ಶಾಲೆಯ ಅಗತ್ಯತೆಗಳ ಆದ್ಯತೆ ಮಾಡಿಕೊಂಡು ಲಭ್ಯ ಭಾಗೀದಾರರ ಸಂಯೋಜನೆ ಮೂಲಕ ಗುಣಮಟ್ಟದ ಶಿಕ್ಷಣ ನೀಡಲು ಪ್ರಯತ್ನಿಸುವುದು ನಮ್ಮಗಳ ಆದ್ಯ ಕರ್ತವ್ಯವಾಗಿದೆ.

## ಉಪಸಂಹಾರ:

ಶಾಲೆಯು ಒಂದು ಪುಟ್ಟ ಸಮಾಜ. ಗುಣಾತ್ಮಕ ಶಿಕ್ಷಣವನ್ನು ಎಲ್ಲಾ ಅರ್ಹವಯಸ್ಸಿನ ಮಕ್ಕಳಿಗೆ ಲಭ್ಯವಾಗುವಂತೆ ಮಾಡುವುದು ಶಾಲಾ ಶಿಕ್ಷಣದ ಪ್ರಧಾನ ಗುರಿ. ಇದನ್ನು ಸಾಂಸ್ಥಿಕ ರೂಪದ ಶಾಲೆಯು ತನ್ನ ಭಾಗೀದಾರರ ಸಹಕಾರದಿಂದ ಸಾಕಾರಗೊಳಿಸಲು ನಿರಂತರವಾಗಿ ಪ್ರಯತ್ನಿಸುತ್ತದೆ. ಈ ರೀತಿಯ ಪ್ರಯತ್ನಗಳು ಸ್ವಾವಲೋಕನದಿಂದ ಕೂಡಿರಬೇಕು ಮತ್ತು ಸಾಮೂಹಿಕ ಪ್ರಯತ್ನಗಳಾಗಬೇಕು ಎಂಬುದು ಈ ಮಾಡ್ಯೂಲ್ ನ ಪ್ರಧಾನ ಆಶಯ.

ಈ ಮಾಡ್ಯೂಲ್ ನಲ್ಲಿ ಒಟ್ಟು ಆರು ಅಧ್ಯಾಯಗಳಿದ್ದು, ಶಿಬಿರಾರ್ಥಿಗಳಾದ ನಾವು ಈ ಕೆಳಗಿನಂತೆ ಸ್ವಾವಲೋಕನ ಮಾಡಿ ಕೊಂಡಿದ್ದೇವೆ.

- ✓ ಮೊದಲ ಅಧ್ಯಾಯದಲ್ಲಿ ಗುಣಾತ್ಮಕ ಶಿಕ್ಷಣದಲ್ಲಿ ಭಾಗಿದಾರರ ಪಾತ್ರ ಈ ಮಾಡ್ಯೂಲ್ ನ ಸಂಕ್ಷಿಪ್ತ ಪರಿಚಯದ ಜೊತೆಗೆ ಉದ್ದೇಶಗಳು ಮತ್ತು ಅದರ ವ್ಯಾಪ್ತಿಯನ್ನು ಅರ್ಥ ಮಾಡಿಕೊಂಡಿದ್ದೇವೆ.
- ✓ 2ನೇ ಅಧ್ಯಾಯದಲ್ಲಿಗುಣಾತ್ಮಕ ಶಿಕ್ಷಣದಅರ್ಥವನ್ನು ಪರಿಶೋಧಿಸುವ ಮೂಲಕ ಗುಣಾತ್ಮಕ ಶಿಕ್ಷಣದ ಮಹತ್ವ ಮತ್ತು ,ಸಮುದಾಯದ ಸಾಂಸ್ಥಿಕ ಘಟಕವಾಗಿ ಶಾಲೆಯನ್ನು ಅರ್ಥಮಾಡಿಕೊಂಡೆವು. ಶಾಲೆ ಎಂದರೆ ಕೇವಲ ಭೌತಿಕ ಕಟ್ಟಡವಷ್ಟೇ ಅಲ್ಲ, ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುವ ವಿದ್ಯಾರ್ಥಿ ಕೇಂದ್ರಿತ ಅನುಭವಾತ್ಮಕ ಕಲಿಕೆ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೆ ಅಗತ್ಯ ಸಂಸ್ಥೆಗಳು ಎಂಬ ಮಾಹಿತಿ ಪಡೆದೆವು.ಸರ್ಕಾರಿ /ಸರ್ಕಾರೇತರ ಸಂಸ್ಥೆಯ ಮಕ್ಕಳ ಕಲಿಕಾ ಸಾಧನಾ ಸಮೀಕ್ಷೆಯ ವರದಿಗಳನ್ನು ವಿಶ್ಲೇಷಿಸುವ ಮೂಲಕ ಪ್ರಸ್ತುತ ಶಾಲಾ ಶಿಕ್ಷಣದ ವಾಸ್ತವ ಚಿತ್ರಣವನ್ನು ಮಿತಿಗಳೊಂದಿಗೆ ಅರ್ಥ ಮಾಡಿಕೊಂಡಿದ್ದೇವೆ ಹಾಗೂ ಶಾಲಾ ಶಿಕ್ಷಣದ ಸವಾಲುಗಳು ಮತ್ತು ಶಾಲಾ ಶಿಕ್ಷಣವನ್ನು ಸುಧಾರಿಸಲು ಕೈಗೊಳ್ಳಬಹುದಾದ ಸಲಹೆಗಳನ್ನು ಅರಿತೆವು.
- ✓ 3ನೇ ಅಧ್ಯಾಯದಲ್ಲಿ ಗುಣಾತ್ಮಕ ಶಿಕ್ಷಣದ ಪ್ರಕ್ರಿಯೆಯ ಭಾಗೀದಾರರು ಯಾರು?ಅವರು ತಮ್ಮ ಪಾತ್ರಗಳನ್ನು/ಹೊಣೆಗಾರಿಕೆಗಳನ್ನು ಹೇಗೆ ನಿರ್ವಹಿಸುತ್ತಿದ್ದಾರೆ? ಹೇಗೆ ನಿರ್ವಹಿಸಬೇಕು? ಎಲ್ಲಾ ಭಾಗೀದಾರರನ್ನು ಕ್ರಿಯಾಶೀಲರನ್ನಾಗಿಸಲು ಏನು ಮಾಡಬೇಕು? ಎಂಬುದನ್ನು ಮತ್ತು ವಿವಿಧ ಭಾಗೀದಾರರನ್ನು ಶಾಲಾ ಪ್ರಕ್ರಿಯೆಗೆ ಹೇಗೆ ಹೊಂದಿಸಿಕೊಳ್ಳುವುದು ಅಥವಾ ಸಕ್ರಿಯವಾಗಿ ತೊಡಗಿಸುವುದರಿಂದ ಆಗುವ ಲಾಭಗಳೇನು? ಎಂಬುದನ್ನು ಕುರಿತು ಚರ್ಚಿಸಿದೆವು . ಅಲ್ಲದೆ ವಿವಿಧ ಭಾಗೀದಾರರ ಒಳಗೊಳ್ಳುವಿಕೆಯಿಂದಗುಣಾತ್ಮಕ ಶಿಕ್ಷಣದ ಗುರಿಗಳನ್ನು ಸಾಕಾರಗೊಳಿಸಿರುವ ಕೆಲವು ಶಾಲೆಗಳ ಯಶೋಗಾಥೆಗಳನ್ನು ಅವಲೋಕಿಸಿ ಗುಣಾತ್ಮಕ ಶಿಕ್ಷಣದ ಒಳನೋಟಗಳನ್ನು ಪಡೆದೆವು.
- ✓ 4ನೇ ಅಧ್ಯಾಯದಲ್ಲಿ ತಮ್ಮ ಕನಸಿನ ಶಾಲೆಯನ್ನು ವಿವಿಧ ಭಾಗೀದಾರರನ್ನು ತೊಡಗಿಸುವುದು ಹೇಗೆ ? ಎಂಬುದನ್ನು ವಿವಿಧ ಸನ್ನಿವೇಶಗಳಿಗೆ ಅನುಗುಣವಾಗಿ, ತಮ್ಮದೇ ಆದ ಕಾರ್ಯತಂತ್ರಗಳನ್ನು ಸ್ಥಳೀಯವಾಗಿ ಚಿಂತಿಸಿ ಯೋಜನೆ ರೂಪಿಸಿದೆವು.
- ✓ ಅಧ್ಯಾಯ 5 ಮತ್ತು 6 ಉಪಸಂಹಾರ ಮತ್ತು ಆಕರ ಗ್ರಂಥಗಳು

ಹೀಗೆ ಶಾಲಾ ಶಿಕ್ಷಣದಲ್ಲಿ ವಿವಿಧ ಭಾಗೀದಾರರನ್ನು ಗುರುತಿಸಿ, ಅವರನ್ನು ಸಕ್ರಿಯವಾಗಿ ತೊಡಗಿಸುವ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬಹುದು ಎಂಬ ಅಂಶವನ್ನು ವಿವರವಾಗಿ ಮಾಡ್ಯೂಲ್ ನಲ್ಲಿ ಚರ್ಚಿಸಿದೆವು. ಶಿಬಿರಾರ್ಥಿಗಳು ಚಟುವಟಿಕೆಗಳಲ್ಲಿ ಭಾಗವಹಿಸಿ ಸ್ವಾವಲೋಕನ ಮಾಡಿಕೊಂಡರು.ತರಬೇತಿ ಪಡೆದ ನಂತರ ವಿವಿಧ ಭಾಗೀದಾರರ ಬಗ್ಗೆ, ಗುಣಾತ್ಮಕ ಶಿಕ್ಷಣದ ಬಗ್ಗೆ, ಶಿಕ್ಷಕರ ಮನೋಭಾವ/ಮನೋದೋರಣೆ ಬದಲಾದರೆ ನೂತನ ಕಾರ್ಯ ತಂತ್ರಗಳ ಮೂಲಕ ಶಾಲೆಯ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಭಾಗೀದಾರರನ್ನು ತೊಡಗಿಸುವಲ್ಲಿ ಯಶಸ್ವಿಯಾದರೆ, ಸುಂದರ ಶಾಲೆಯನ್ನು ಕಟ್ಟುವ ಕೈಂಕರ್ಯದಲ್ಲಿ ನಿರತರಾದರೆ, ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇವೆ .

ಶಾಲಾ ವಯಸ್ಸಿನ ಪ್ರತಿಯೊಂದು ಮಗುವು ಗುಣಾತ್ಮಕ ಶಿಕ್ಷಣ ಪಡೆಯಬೇಕೆಂಬುದು ನಮ್ಮ ಸಂವಿಧಾನದ ಆಶಯವಾಗಿದೆ . ಶಿಕ್ಷಣದ ಹಕ್ಕನ್ನು ಸಂತೋಷದಿಂದ ಅನುಭವಿಸಲು ಅನುವಾಗುವಂತೆ ಅಗತ್ಯವಾದ ಬೆಂಬಲ ನೀಡುವುದು, ಭಾಗೀದಾರರಾದ ನಮ್ಮೆಲ್ಲರ ಹೊಣೆಯಾಗಿದೆ. ಇದನ್ನು ಸ್ವಾವಲೋಕನ ಮತ್ತು ಸಾಮೂಹಿಕ ಪ್ರಯತ್ನಗಳ ಮೂಲಕ ಯಶಸ್ವಿಯಾಗಿ ನಿರ್ವಹಿಸೋಣ.

**ಆಕರ ಗ್ರಂಥಗಳು**


- ಡಿ.ಎಸ್.ಇ.ಆರ್.ಟಿ ಸಂಶೋಧನಾ ಪ್ರಬಂಧಗಳು
- NAS, ASER, FLS, FLN ವರದಿಗಳು
- ವೆಬ್ ಸೈಟ್ ವರದಿಗಳು
- ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಮುಖ್ಯಾಂಶಗಳು
- ಸಮಾಜ ಶಾಸ :- ಶ್ರೀಮತಿ ಡಾ. ನಂಜಮ್ಮಣ್ಣಿ
- ಸಮಾಜ ಮತ್ತು ಶಿಕ್ಷಣ:- ಪ್ರೊ. ಕೆ. ರಘು
- ಶೈಕ್ಷಣಿಕ ಜ್ಞಾನಕೋಶ :- ಮೈಸೂರು ವಿಶ್ವವಿದ್ಯಾನಿಲಯ

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.


ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836–2441129
ಇ–ಮೇಲ್ : sislepdirector.dwd@gmail.com